ಕರ್ಣಾಟಕ ಕಾವ್ಯಮಂಜರಿ.

— ಕೃಷ್ಣಗೋಪೀವಿಲಾಸಂ —

[೧೦]

ಎಸ್. ಜಿ. ನರಸಿಂಹಾಚಾರ್,
ಮ. ಆ. ರಾಮಾನುಜ್ಯೆಯಂಗಾರ್,
ಇವರಿಂದ ಪರಿಷ್ಕರಿಸಲ್ಪಟ್ಟ

ಕರ್ಣಾಟಕ ಕಾವ್ಯಮಂಜರಿ ಪ್ರೊಪ್ರೈಟರುಗಳಿಗಾಗಿ

ಮೈಸೂರು,

ಸದ್ವಿದ್ಯಾಮಂದಿರ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

೧೯೯೪.

[ಕ್ರಯ ೩ ಆಣೆ.

ಕರ್ಣಾಟಕಕಾವ್ಯಮಂಜರಿ ಆಫೀಸ್ ಮ್ಯಾನೇಜಿಂಗ್ ಪ್ರೊಪ್ರೈಟರ್ ಮ. ಕುಮಾರಸ್ವಾಮಿ ತಿರುಮಲಾಚಾರ್, ಆ. ಅನಂದಾಳ್ವಾರ್ ಇವರಲ್ಲಿ ದೊರೆಯುತ್ತದೆ

UNIVERSAL
LIBRARY
OU_200557
UNIVERSAL
LIBRARY

Registered according to ACT XXV 1867.
(All rights reserved)

ಕೃಷ್ಣಗೋಪೀವಿಲಾಸಂ.

(ಸಾಂಗತ್ಯಂ)

ಶ್ರೀಮನೋಹರ ದಿವ್ಯಮೂರ್ತಿ ಸಂತತಪುಣ್ಯ । ನಾಮ ಸದ್ಗುಣಗಣಕೀರ್ತಿ ॥
ರಾಮನೆನ್ನಯ ಹೃದಯದೊಳಿರ್ದು ಕೃತಿಯನು । ನೇಮಿಸಿದಂತೆ ಪೇಳುವೆನು ॥೧

ಅಜನ ಪಟ್ಟದ ರಾಣಿಯಖಿಳಗುಣಶ್ರೇಣಿ । ವಿಜಿತಾಬ್ಜಪಾಣಿ ಸುಶ್ರೋಣಿ ॥
ಗಜರಾಜಗಮನೆ ಪನ್ನಗವೇಣಿ ಕಲ್ಯಾಣಿ । ಭಜಿಪೆ ವರವನೀಯೆ ವಾಣಿ ॥೨

ಮನವೆಂಬ ಮಾನಿನಿಗಿನಿಯ ಚೇತನನು ತಾಂ । ತನುವೆಂಬ ರಾಜ್ಯವಾಳುತಲಿ ॥
ವನರುಹಾಂಬಕನ ಮಹಿಮೆಯ ಬೋಧಿಸಿದ ತ । ನ್ನಿನಿಯಳಿಗತಿವಿನಯದೊಳು ॥೩

ಶೇಷನೀಧರೆಯೊಳಗುದಿಸಿ ಮಾನುಷದಿವ್ಯ । ವೇಷದಿಂ ಯತಿರಾಜನೆನಿಸಿ ॥
ಪೋಷಿಸಿ ಜಗದ ಜನರನು ಪಾವನಗೈದ । ಭಾಷ್ಯಕಾರರಿಗೆ ವಂದಿಸುವೆ ॥೪

ಪಂಕೇಜಾಕ್ಷನ ಪಾದವನು ಕಾಣ್ಬ ಮಾರ್ಗವ । ಶಂಕೆಯಿಲ್ಲದೆ ಕೃಪೆಯಿಂದ ॥
ಬಿಂಕದಿಂದುಪದೇಶಗೆಯ್ದ ಶ್ರೀಮದ್ಗುರು । ವೆಂಕಟಾರ್ಯರಿಗೆ ವಂದಿಸುವೆ ॥೫

ಛಂದಸ್ಸುಲಕ್ಷಣಗಳ ನೋಡಬೇಕೆಂಬ । ಸಂದೇಹಗಳ ಪರಿಹರಿಸಿ ॥
ಇಂದಿರಾಪತಿ ನಾರಾಯಣನ ಶ್ರೀಪಾದಾರ । ವಿಂದಕೆ ನತಿಗೆಯ್ಯುತಿಹೆನು ॥೬

ಗಂಗೆಯು ಗಾಜ ಕುಪ್ಪಿಗೆಯೊಳು ತರಲು ತಾಂ । ಗಂಗೆಯಲ್ಲದೆ ಜಲವಹುದೆ ॥
ರಂಗನ ಕಥೆಯು ಭಾಷಾಂತರದೊಳು ಪೇಳೆ ತಾ । ಮಂಗಳಮಹಿಮೆ ತಪ್ಪುವುದೆ ॥೩

ಆವನ ಪಾದದೊಳುದಿಸಿದ ಗಂಗೆ ತಾಂ । ಪಾವನವಾದಳೀಧರೆಗೆ ॥
ಆವಾಸುದೇವನ ಕಥೆಯೊಳು ತಪ್ಪ ಮ । ತ್ತಾವ ಸುಕೃತಿಯೆಣಿಸುವನು ॥೪

ಹರಿಶರಣರ ಸಂಗ ದುರಿತವಾರಣಸಿಂಗ । ಹರಿಕಥೆಯುಮೃತತರಂಗ ॥
ಹರಿಸ್ಮರಣೆಯೆ ಮಂತ್ರಜಪ ವೇದವೇದಾಂಗ । ವರಿವೊಡಿದೀಗಂತರಂಗ ॥ ೯

ರಂಗನ ನಾಮವಿಲ್ಲದ ಕೃತಿಯೊಳಗೆ ಪ್ರ । ಸಂಗರಚನೆಯಿದ್ದರೇನು ॥
ಮಾಂಗಲ್ಯಸೂತ್ರವಿಲ್ಲದ ಯುವತಿಗೆ ಭೂಷ । ಣಂಗಳೆ ತೊಡಿಸಿದಂತಿಹುದು ॥೧೦

ನಿಚ್ಚಳವಾಗಿರ್ದೊಡೆಯು ಕೃತಿಯೊಳಗೆ ನ । ಮ್ಮಚ್ಯುತನಾಮವೊಂದಿರಲು ॥
ಬಿಚ್ಚೊಲೆ ಕೆರಿಯ ಮಣಿಯೆ ಸಾಕು ಪತಿಯುಳ್ಳ।ಸಚ್ಚರಿತೆಯೆ ಲಕ್ಷ್ಮಿ ಧರೆಗೆ ॥೧೧

ಅಂಬುಜವದನೆ ಕೇಳಾಪರಮಾತ್ಮನ । ನಂಬದೆ ಪಲವು ದೈವಗಳಾ ॥
ಪಂಬಲಿಸುವರು ಶಾಲ್ಯನ್ನವನೊಲ್ಲದೆ । ಯಂಬಲಿಯನು ಸೊರೆವಂತೆ ॥೧೨

ಆರ ನಾಭಿಯೊಳುದಿಸಿದನಬುಜಾಸನ । ನಾರಿಂದಲಾದ ಶಂಕರನು॥
ಬೇರಿಗಿಂದೆಲೆ ಮೊದಲೆಂಬ ಮೂರ್ಖರ ಮಾತ । ನಾರಾಮೊಡೆಯು ನಂಬ ಬಹುದೆ ॥

ಹರಿಯೆಂದುದಿಲ್ಲ ತಾ ಹರನೆನ್ನಲಿಲ್ಲ ಮೇ । ಣ್ಸರಸಿಜಾಸನನೆಂದುದಿಲ್ಲ ॥
ಪರವಸ್ತುವೆಂದು ಕರೆಯಲು ಕರಿಯ ಕಾಯ್ದ । ಗರುಡವಾಹನಗೆರಗುವೆನು ॥೧೪

ಪ್ರಳಯದೊಳಿಂಡವೆಲ್ಲವು ಮುಳುಗಲು ವಟ । ದಲೆಯೊಳು ಶಿಶುವಿನಂದದಲಿ ॥
ಪಲವು ಚೇತನಗಳನುದರದೊಳಿಂಬಿಟ್ಟ । ಜಲಜಾಕ್ಷಗಾನೆರಗುವೆನು ॥೧೫

ಹತ್ತು ಸಾವಿರವೆಂಗಳೊಡಗೂಡಿ ಬ್ರಹ್ಮಚಾ । ರಿತ್ವದ ಮಹಿಮೆಯ ಮೆರೆದು ॥
ಇತ್ತನಸುವನುತ್ತರೆಯ ಕಂದಗೆಂಬುದು । ಮತ್ತಾವ ದೇವರಿಗುಂಟು ॥೧೬

ಆಳಿದೊಡೆಯನಾದನಖಿಳಜಗಂಗಳಿ । ಗಾಳಾದನಾಧನಂಜಯಗೆ ॥
ಮೂಲೋಕವನು ತನ್ನೊಳಗೆ ತೋರ್ಪ ಕೃಷ್ಣನ । ಲೀಲೆಗಿನ್ನೆಣೆಯಾವದುಂಟು॥

ಶಿಶುವಿನಂದವ ನಂದಗೋಪಯಶೋದೆಗೆ । ಪಶುಗಾಯ್ವ ಮಕ್ಕಳಿಗೊಲಿದು ॥
ವಶನಾಗಿ ಕೆಳೆಯುನೆಂದೆನಿಪ ಶ್ರೀಕೃಷ್ಣನಾ । ಅಸಮಲೀಲೆಗೆ ನಮೋ ಎಂದೆ ॥೧೯

ಸಲ್ಲಲಿತಾನಂದಸುಖವನು ತೋರಿದನು ತಾಂ । ಗೊಲ್ಲವೆಂಗಳನೊಡಗೂಡಿ ॥
ಬಲ್ಲಿದ ಗುರುಶಿಷ್ಯನೆನಿಸಿದನುದ್ಧವ । ನಲ್ಲ ಸಾಂದೀಪದೇವನೊಳು ॥೧೯

ಶ್ರೀವರನವತಾರದೊಳು ಕೃಷ್ಣ ದೇವನ । ಪಾವನಚರಿತೆಯೊಳೆನ್ನ ॥
ಭಾವ ಬಿಸುಗೆವಡೆದಿರೆ ತಾತಾಯೆಂದು ಮ । ತ್ತಾವಧು ನಮಿಸಿ ಬಿನ್ನವಿಸಿ ॥೨೦

ಇಂದೀವರಾಕ್ಷಿ ಕೇಳ್ಯದುಕುಲವರಸ ಗೋ । ವಿಂದ ಧರೆಯೊಳವತರಿಸಿ ॥
ನಂದಗೋಕುಲದೊಳಗಾಡಿದ ನಾಟಕ । ದಂದವೆಲ್ಲವ ವಿವರಿಸುವೆ ॥೨೧

ವಸುಧೆ ಭಾರವ ಪೊರಲಾರೆನೆನುತ ಬಂದು । ಬಿಸಜಸಂಭವಗೆ ಬಿನ್ನವಿಸಿ ॥
ಬಿಸಗೊಳುತಿಂಗಡಲಲ್ಲಿಗೈತಂದು ಪೊಂ । ಬಸಿರ ನುತಿಸಿದ ಶ್ರೀಹರಿಯ ॥೨೨

ನಗಧರ ನಗುತ ನಾಲ್ಮೊಗನ ಬಿನ್ನಹಗೇಳಿ । ಗಗನದೊಳ್ಗಂಭೀರರವದಿ ॥
ಮಗನೆ ಕೇಳವನೊಳವತರಿಸುವೆನೆಂದು । ಜಗದೀಶನೊಲಿದು ನೇಮಿಸಿದ ॥೨೩

ಇತ್ತಲಾಮಧುರೆಯೊಳ್ಕಂಸನೆಂಬನು ಖಳ । ವೃತ್ತಿಯಿಂದವನಿಪನೆನಿಸಿ ॥
ಕೃತ್ತಿವಾಸಾದಿಗಳನು ಗಣಿಸದೆ ಬಲು । ಮತ್ತನಾಗಿರ್ದನಾಪುರದೆ ॥೨೪

ಇರಲವನನುಜೆ ದೇವಕಿಗೆ ಶೂರಾಖ್ಯನ । ವರಸುತ ವಸುದೇವನೆಂದು ॥
ವರನಾದನಧಿಕಸಂಭ್ರಮದಿ ವೈವಾಹದೊಳ್ । ಮೆರೆವಣಿಗೆಯ ಮಾಡುತಿರಲು ॥೨೫

ನುಡಿದುದಭ್ರದೊಳಶರೀರವಾಣಿಯು ಖಳ । ನೊಡನೆ ಕೇಳೆಲೊ ಮೂಳ ನಿನ್ನಾ ॥
ಒಡಹುಟ್ಟಿದವಳೆಂಟನೆಯ ಗರ್ಭದೊಳು ಜಗ । ದೊಡೆಯನುದಿಸಿ ಕೊಲ್ವನೆನುತ ॥

ಕೇಳಿದಾಕ್ಷಣ ಖಳ ಕನಲಿ ಕರದಿ ಕರ । ವಾಳವ ಪಿಡಿದು ಭಾಮಿನಿಯಾ ॥
ಸೀಳುವೆನೆನೆ ಸತಿ ನಡುಗಲು ವಸುದೇವ । ಹೇಳಿದ ಕಂಸಗುತ್ತರವಾ ॥೨೭

ಖತಿಗೊಳಲೇತಕರಸ ನಿನ್ನ ಪಗೆ ಯಾರು । ಸತಿಯೊ ಮೇಣಿವಳ ಗರ್ಭದೊಳು ॥
ಸುತರಾದೊಡವರನೊಪ್ಪಿಸುವೆನೆಂದೆನುತ ದು । ರ್ಮತಿಯು ತಿಳುಹಿ ಬಿಡಿಸಿದನು ॥

ವಸುದೇವ ನುಡಿದ ವಾಕ್ಯವ ಕೇಳಿ ಕಂಸ ತ । ನ್ನಸುವ ರಕ್ಷಿಸಿ ಕೊಂಬೆನೆನುತ ॥

ಮಿಸುಕೆದಂತಿವರ ಕಾವಲನಿಟ್ಟು ದಾನವ । ನೆಸೆದನಚ್ಯುತನ ಭಯದೊಳು ॥ ೨೯
ಇತ್ತಲಾಕಾರಗಾರದೊಳು ದೇವಕಿದೇವಿ । ಪೆತ್ತಳು ಗಂಡುಶಿಶುವನು ॥
ಮೃತ್ಯು ರಕ್ಕಸ ಬಂದು ಪಸುಳೆಯ ಕಿತ್ತುಕೊಂ । ಡೆತ್ತಿ ಕಡಿದ ಶಿಲಾತಲದಿ ॥ ೩೦
ಇಂತಾರು ಮಕ್ಕಳ ಪಡೆದಳು ಕಾಂತೆ ಕೈ । ತಾಂತಗೊಪ್ಪಿಸಿ ಬಸವಳಿದು ॥
ಚಿಂತಿಸಿ ಮರುಗುತ್ತ ನಾಥ ನಾಥನೆ ಲಕ್ಷ್ಮೀ । ಕಾಂತ ರಕ್ಷಿಪುದೆಂದಳಬಲೆ ॥ ೩೧
ಇರಲು ಕ್ಷೀರಾಬ್ಧಿಯೊಳಿರವಿಂದನೇತ್ರ ತಾ । ನೊರಗಿರ್ದ ಫಣಿರಾಜನೊಡನೆ ॥
ಪರಮಪವಿತ್ರ ದೇವಕಿಯ ಗರ್ಭದೊಳು ನೀ । ನಿರು ಕಾರ್ಯವುಂಟೆಂದು ನಗುತ ॥
ಎನಲು ಹಸಾದವೆನುತಲಹಿರಾಜ ತಾ ॥ ನನುಪಮೆಯುದರದೊಳಿರ್ದು ॥
ಅನಘನಾಕ್ಷಣ ರೋಹಿಣಿಯ ಪೊಡೆಯನು ಪೊಕ್ಕು । ಜನಿಸಿದ ನಂದಗೋಕುಲದಿ ॥
ದೇವಕಿಯುದರದೊಳೊಡನೆ ದೇವೋತ್ತಮ । ನಾವಿರ್ಭವಿಸಲದ ಕಂಡು ॥
ದೇವಸಮೂಹವೆರಸಿ ಬಂದು ನಾಲ್ಮೊಗ । ನಾವಧೂಮಣಿಗೆ ವಂದಿಸಿ ॥ ೩೪
ತಾಯೆ ನಿನ್ನಯ ಗರ್ಭದೊಳಗಖಿಲಾಂಡಶ್ರೀ । ನಾಯಕನವತರಿಸುವನು ॥
ಆಯಾಸವೇತಕಿನ್ನಚ್ಯುತ ನಿನಗೆ ನಿ । ರಾಯಾಸದೊಳು ಸುತನಹನು ॥ ೩೫
ಇದುವೆ ವೈಕುಂಠ ಕ್ಷೀರಾಬ್ಧಿಯಾದುದು ನಿನ್ನಾ । ಉದರಮಧ್ಯವೆ ವಿಷ್ಣುಪದವು ॥
ಯದುಕುಲತಿಲಕನ ಮಾತೆ ದೇವಕಿ ನಿನ್ನ । ಪದಕಮಲಕೆ ವಂದಿಸುವೆನು ॥ ೩೬
ಇಂತು ಸನ್ನುತಿಗೆಯ್ದು ಕಮಲಜನನಿತರೊ । ಳಂತರ್ಧಾನವನು ಕೈಕೊಂಡ ॥
ಸಂತಸದಿಂ ವಸುದೇವನ ಕಾಂತೆ ನಿ । ತಾಂತಸುಖದೊಳಿರುತಿರಲು ॥ ೩೭
ಆವನಿತಾಮಣಿಗಾದುದು ನವಮಾಸ । ಶ್ರಾವಣಬಹುಳಾಷ್ಟಮಿಯೊಳು ॥
ಪಾವನರೋಹಿಣಿ ವೃಷಭಲಗ್ನದೊಳಾಗ । ಶ್ರೀವರನವತರಿಸಿದನು ॥ ೩೮
ತರುಣಾರ್ಕಸದೃಶಕಿರೀಟದ ಕಾಂತಿಯಿಂ । ದರಳಿದ ಸರಸಿಜಾನನದ ॥
ಕರುಣಾಕಟಾಕ್ಷಾಪಾಂಗದ ತೆರೆಯೊಳಿಗಾಳ್ವ । ಮರಕತಮಕರಕುಂಡಲದ ॥ ೩೯
ಬಿರಿದ ಸಂಪಗೆಯ ಜರೆವ ನಾಸಿಕದ ಮುದ್ದು । ಗರೆವ ವದನದಂತರುಚಿಯಾ ॥
ವರಕಂಬುಕಂಠದೊಳ್ ಚಂದ್ರಮನಂದದೆ । ಮೆರೆವ ವಜ್ರದ ಮಣಿಸಿರಿಯಾ ॥ ೪೦

ಕರಚತುಷ್ಟಯ ಶಂಖಚಕ್ರಗದಾಭಯ । ವರಹಸ್ತಾಂಗುಲಿಮುದ್ರಿಕೆಗಳ ॥
ಸರಸಿಜಾಸನನುದಿಸಿದ ನಿಮ್ನನಾಭಿಯ । ಕರಿಕರೋರುಗಳ ಸೊಂದರದ ॥೪೧
ಪರಮಪವಿತ್ರವೆನಿಪ ಚಾರುಜಂಘೆಯ । ಧರೆಯ ಪೊರೆವ ತಳಿರಡಿಯಾ ॥
ಸುರರಿಪುತಿಮಿರಮಾರ್ತಂಡನೆನಿಸಿ ಕೊಂಬ । ಸುರುಚಿರವಾದ ಪಿಂಡೆಯದ ॥೪೨
ಚಾರುಪೀತಾಂಬರವೆಂಬ ಮಿಂಚಿನ ನೀಲ । ನೀರದದಂತೆ ರಾಜಿಸುವ ॥
ವಾರಿಜಾಕ್ಷನ ಮೂರ್ತಿಯ ಕಂಡು ವಸುದೇವ । ಗಾರಿಣಿಗೊಡಲ ಚಾಚಿದನು ॥೪೩
ಹರಿಯ ಶ್ರೀಪದವ ಶಿರದೊಳಾಂತು ಭಕ್ತಿಯಿಂ । ಪರಮಪುರುಷ ನಮೋ ಎನುತ ॥
ಕರಿರಾಜವರದ ಕಾಕುತ್ಸ್ಥ ಲಕ್ಷ್ಮೀಕಾಂತ । ನರಹರಿಯೇ ನಮೋ ಎಂದ ॥೪೪
ಸರಸಿಜಭವಭವೇಂದ್ರಾದಿಗಳ್ತವಪಾದ । ಸರಸಿಜವನು ಕಾಣಲರಿದು ॥
ಮರುಕವೆಂತುಟೊ ಭಕ್ತರೊಳು ನಿನಗೆಲೊ ದೇವ । ಕರುಣಾರ್ಣವ ಶರಣೆಂದ ॥೪೫
ಎನಲು ಚತುರ್ಭುಜದಿಂ ಬಿಗಿಯುವ್ವುತ । ಲನಘನಾನಕದುಂದುಭಿಯನು ॥
ವಿನಯೋಕ್ತಿಯಿಂದ ಮನ್ನಿಸುತ ದಂಪತಿಗಳಿ । ಗೆನುಪಮನೆಂದನುತ್ತರವಾ ॥೪೬
ಅತುಲಿತತಪಗಳ ಸಲಿಸುತೆನ್ನಂದದ । ಸುತನ ಬಯಸಲು ನಾ ನಿಮಗೆ ॥
ಸುತನಾಗಿ ಧರೆಯ ಪೊರೆಯಲೋಸುಗಲೀ । ಕ್ಷಿತಿಯೊಳಗೊಲಿದುದಿಸಿದೆನು ॥೪೭
ಎನುತಲಾಕ್ಷಣ ದಿವ್ಯರೂಪಮಂ ಮರಸಿ ತಾ । ಮನುಜಶಿಶುವ ಲೀಲೆಯನು ॥
ಅನುಪಮನಂಗೀಕರಿಸಿದೊಡಾಗಳೆ । ದನುಜಭಯವ ಸ್ಮರಿಸಿದರು ॥೪೮
ಕಂಡರೆ ಗಂಡುಶಿಶುವ ಬಿಡಲರಿಯನು । ದ್ದಂಡಪಾತಕಿ ಕಂಸನೀಚ ॥

... ...

ತಂದ ನಂದನ ಪಸುಳೆಯ ವಸುದೇವನ । ಮಂದಿರದೊಳು ಬಿಡಲಾಗ ॥
ಕಣ್ದೆರೆದಳಲು ಕಾವಲ ದಾನವರು ಪರಿ । ತಂದೆಂದರಾ ಕಂಸನೊಡನೆ ॥೫೯
ಕೇಳಿದಾಕ್ಷಣ ಕಂಸ ಬಂದು ದೇವಕಿಯನು । ಕೇಳಿದನಾಪೆಣ್ಣಿಸಿಸುವಾ ॥
ಬಾಳಮರುಕದೆ ಬಿಡದೆ ದೈನ್ಯಪಡುತಿರೆ । ಕೇಳಲುಜ್ಜುಗಿಸಿ ಬೊಬ್ಬಿರಿದ ॥೬೦

ನಡುಗುತ ಪಸುಳೆಯನಣ್ಣಗೊಪ್ಪಿಸಲು ತಾ । ಲ್ವಿಡಿದು ರಕ್ಕಸ ನಭಕಿಡಲು ॥
ನುಡಿಪುದಾಗಸದೊಳಾದುರ್ಗಿ ದಾನವನೆದೆ । ಯೊಡಯೆ ಕೆಲೋರವಾಕ್ಯವನು ॥೬೧

ಎಲವೊ ದಾನವ ನಿನ್ನ ಕೊಲಲೋಸುಗಸುರಾರಿ । ಬಳೆಯುತ್ಪಿದಾನೆ ಗೋಕುಲದಿ ॥
ಚಲವ ಮಾಣಿನ್ನೆನುತಲಿ ನಭಕೆಡರಿದ । ಳಲಘುವಿಕ್ರಮಿ ವೇಗದಿಂದ ॥೬೦

ಬಂದು ದಾನವ ತನ್ನ ಮಂದಿರವನು ಪುಗು । ತಿಂದಿರೇಶನ ಭಯದಿಂದ ॥
ಕೆಂದಿ ತನ್ನಯ ಖಳವೃಂದವ ಕೆರೆದಾಗ । ಲೆಂದ ಮುಂದಹ ಕಾರ್ಯಗಳನು ॥೬೩

ವಕ್ಕಸವಾದ ವಾಕ್ಯಗಳೆಂಬ ಕುಂತವ । ನಿಕ್ಕಿತೆದೆಗೆ ವಿಷ್ಣುಶಕ್ತಿ ॥
ಮಕ್ಕಳಾಟಿಕೆಯೋತಕಿನ್ನು ಗೋಕುಲದೊಳು । ರಕ್ಕಸಧ್ವಂಸಿ ಬಳೆವನು ॥೬೪

ಆದೊಡೇನಿದಕೊಂದುಪಾಯವುಂ ಪೇಳ್ವೆ ನಾಂ । ಮೇದಿನಿಯೊಳು ಶಿಶುಗಳನು ॥
ಭೇದಿಸಿ ಕಂಡು ಕೊಲ್ಲುವೊಡೆ ಪೂತನಿಯೀಗ । ಲೈದಲಿ ಗೋಕುಲಕೆಂದ ॥೬೫

ಎನಲು ಹಸಾದವೆನುತಲಿ ಪೂತನಿ ತನ್ನ । ಸ್ತನದೊಳು ತುಂಬಿ ವಿಷವನು ॥
ಅನುಪಮಮನುಜವೇಷವನು ಧರಿಸಿ ಖಳ । ವನಿತೆ ಬಂದಳು ಗೊಲ್ಲಪುರಕೆ ॥೬೬

ಇತ್ತಲಾಗೋಕುಲದಲಿ ನಂದಗೋಪ ತಾ । ಪುತ್ರೋತ್ಸವಾನಂದದಿಂದ ॥
ಇತ್ತನನೇಕಧೇನುಗಳ ದಾನಾರ್ಥದಿಂ । ದುತ್ತಮವಿಪ್ರರಿಗೊಲಿದು ॥೬೭

ಮಂದಿರಗಳನಲಂಕರಿಸಿ ರತ್ನಸ್ತಂಭ । ದಿಂದ ನಿರ್ಮಿಸಿ ಮಂಟಪವನು ॥
ಕೆಂದನನೆತ್ತಿಕೊಂತಾವಜ್ರಪೀಠದಿ । ನಂದಯಶೋದೆಯರಿರಲು ॥೬೮

ವ್ರಜವನಿತೆಯರು ಬಂದರು ನೋಡಲೋಸುಗ।ವಜನ ತಂದೆಯ ಮಹೋತ್ಸವವಾ॥
ತ್ರಿಜಗದ್ವಿನುತನ ಮುದ್ದಿಸುತ ಪಾಡಿದರಾಗ । ಗಜಗಮನೆಯರು ಸಂಭ್ರಮದಿ॥೬೯

ಗೊಲ್ಲಸತಿಯರೊಡನಲ್ಲಿಗ್ಬೈದಿದಳು ತಾ । ನೆಲ್ಲರಂದದಿ ಖಳವನಿತೆ ॥
ಚಲ್ಲ ಸಿಸುವನು ಮುದ್ದಿಸಿ ಮಡಿಲಿನೊಳಿಟ್ಟು । ಮೆಲ್ಲನಿತ್ತಳು ಬಿಸಮೊಲೆಯಾ ॥೭೦

ಕಂಡನಾದಾನವಾಂತಕನು ಪೂತನಿ ಮಾಳ್ಪ । ಲಂಡಬುದ್ಧಿಯನು ಚಿತ್ತದಲಿ ॥
ಮುಂಡೆಗೆ ತಕ್ಕ ಬುದ್ಧಿಯು ಪೇಳ್ವೆನೆನುತಸು । ಗೊಂಡನಾಸ್ತನಮುಖದಿಂದ ॥೭೧

ಡೆಂಧಣಿಸಲು ತನು ಕೊಗಿದಳಾಗ ಭೂ । ಮಂಡಲವೊದುರುವಂದದಲಿ ॥

ಬೆಂಡಾದುವಾಲಿಗಳಸುವಿಗುಬ್ಬಸವಾಗೆ । ದಿಂಡುಗೆಡದಳದ್ರಿಯಂತೆ ॥೭೦
ಪೊರಳಲು ಮೊಲೆಯ ಬಿಡದೆ ಮುರಮರ್ದನ । ನಿರಲು ರಕ್ಕಸಿಯುರದೊಳಗೆ ॥
ಪುರಜನವೆಲ್ಲ ನಡುಗುತ ಭಯದೊಳಿರೆ । ಮರುಗಿದಳೆಂದು ಯಶೋದೆ ॥೭೩
ರಕ್ಕಸಿಯಸುವಳಿಯಲು ಶಿಶುವನು ತಂದು । ತಕ್ಕವಿಸಿದ ನಂದಗೋಪಾ ॥
ಮಿಕ್ಕನೆ ಬಾಲಕಪುಣ್ಯವಕಟ ! ಎನು । ತಕ್ಕರಿಂದಲಿ ಮುದ್ದಿಸಿದನು ॥೭೪
ಪೂತನಿಯಳಿದಳೆಂಬುದ ಕೇಳಿ ತನ್ನಯ । ದೂತ ಶಕಟನೆಂಬ ಖಳನಾ ॥
ಪಾತಕಿ ಕಂಸನಟ್ಟಿದನಂದು ಬಾಲನ । ಘಾತಿಪುದೆನುತ ಗೋಕುಲಕೆ ॥೭೫
ನಂದಭವನದಿ ಕುಂದಣದ ತೊಟ್ಟಿಲೊಳು ಗೋ । ವಿಂದನಾನಂದದಿಂದಿರಲು ॥
ಬಂದು ರಕ್ಕಸ ಭಂಡಿಯಂದದಿಂ ಪಾದಾರ । ವಿಂದದ ಬಳಿಯ ಸೇರಿದನು ॥೭೬
ಇದುವೆ ಸಮಯ ಕೊಲ್ವೊಡಿವನೆನುತ ಹರಿ । ಯೊದೆಯೆ ದಾನವದೇಹವದುರಿ ॥
ಪದುಮಭವಾಂಡ ಬಿರಿಯಲು ಘೋಳಿಡುತ ಬಿ । ಚ್ಚದಿರೆ ಬಿದ್ದನು ಖಳ ಧರೆಗೆ ॥೭೭
ಪದುಮನಾಭನ ಲೀಲೆಯದುಬುತವನು ಕಂಡು । ಬೆದರಿತಲ್ಲಿಯ ಜನನಿವಹ ॥
ಸದಮಳಾನಂದವಿಗ್ರಹನ ತಕ್ಕವಿಸುತ । ಮುದದಿ ಮುದ್ದಿಪರು ಗೋವಳರು ॥೭೮
ಏಸು ಜನ್ಮದ ಸುಕೃತವೊ ಗೋಪಗೋಪಿಯ । ರೀಸದಾನಂದಮೂರ್ತಿಯನು ॥
ಕೊಸಿನಂದದೊಳು ತಕ್ಕವಿಪರಿವರ ಪುಣ್ಯ । ರಾಶಿಯನ್ನೆಂತೊ ಕೇಳಬಲೆ ॥೭೯
ಇಂತಿರೆ ಗಾರ್ಗ್ಯನೆನಿಪ ಮುನಿ ಬಂದ ಶ್ರೀ । ಕಾಂತನ ಪದದರುಶನಕೆ ॥
ಸಂತಸದಿಂದಾಚಾರ್ಯನ ಕುರಿತೆಂದ । ನಂತರಂಗವ ನಂದಗೋಪಾ ॥೮೦
ಇತ್ತನಾಕುವರಕೆಂಬೀರವರನು ಮುನಿ । ಹಸ್ತಕಾನಂದ ವಿನಯದಿ ॥
ಪುತ್ರರಿರ್ವರಿಗೆ ನಾಮವ ಕೃಪೆಮಾಳ್ಪುದೆಂ । ದುತ್ತಮನಡಿಗೆರಗಿದನು ॥೮೧
ಎನಲು ಕೃಷ್ಣನ ಪಾದವನರುಹವನು ತನ್ನ । ಪಣೆಗೊತ್ತಿ ಮುದ್ದಿಸಿ ಮುನಿಪ ॥
ಅನುಪಮಪುಣ್ಯನಾಮನಿಗೆ ನಾಮವನಿಡ । ಲೆನಗೆ ಸಾಧ್ಯವೆಯೆಂದ ನಗುತ ॥೮೨
ವಿಷ್ಣುವೀಧರೆಯೊಳಗವತಾರವನು ಮಾಡಿ । ಕೃಷ್ಣಮೂರ್ತಿಯ ವಹಿಸಿರಲು ॥
ಕೃಷ್ಣನೆಂಬಭಿಧಾನವೀತಗೊಪ್ಪುವುದೆಂದು । ವೈಷ್ಣವರರಸ ನೇಮಿಸಿದ ॥೮೩

ಬಲದೊಳು ರಮಣೀಯುವೇಷದೊಳೀತನೆ । ಬಲವಂತನಾದುದರಿಂದ ॥
ಬಲರಾಮನೆಂಬಭಿಧಾನನಾಮಗಳಿವು । ಕಲಿಮಲಹರವಹುದೆಂದ ॥೮೪

ಎಂದು ಕೃಷ್ಣನ ಪದದ್ವಂದಳೆ ತಲೆವಾಗಿ । ನಂದನಿಂದಪ್ಪಣೆವಡೆದು ॥
ಬಂದನು ಗಾರ್ಗ್ಯ ತನ್ನಾಶ್ರಮಕೆಲ್ಲಿ ಗೋ । ವಿಂದನಿದ್ದನು ನಂದಗೃಹದಿ ॥೮೫

ಒಂದು ದಿವಸ ತಾ ನಂದನ ಕಾಂತೆ ಗೋ । ವಿಂದನನಾಡಿಸುತಿರಲು ॥
ಬಂದ ವಾತಾಸುರನೆಂಬ ಕಂಸನ ದೂತ । ನಿಂದು ನೋಡಿದ ವಿಯತ್ತಳದಿ ॥೮೬

ಅರಿದನಸುರನ ಕೃತ್ಯವನು ಮುರಾಂತಕ । ನಿರದೆ ಮಾತೆಯ ತೊಡೆಯಿಂದ ॥
ಸರಿದು ಮೆಲ್ಲನೆ ಸೂರಿ ಧರೆಯೊಳಗಾಗಳು । ಪರಿದಾಡುತಿರ್ದ ಲೀಲೆಯಲಿ ॥೮೭

ಇರಲು ಗೋಕುಲದೊಳು ಬಿರುಗಾಳಿ ಬೀಸಲು । ತುರುಗಾಹಿಗಳು ಬೆದರಿದರು ॥
ಪರಿದಾಡುತಿರ್ದ ಶಿಶುವನಪಹರಿಸಿ ಕೊಂ । ಡಿರದೆ ರಕ್ಕಸನಭಕೆಡರೆ ॥೮೮

ಅಂಬರಕೆಡರಿ ದಾನವ ಸುಳಿಸುಳಿದು ನಿ । ಶ್ವಂಭರನೊಡನಾಡುತಿರಲು ॥
ಪಂಬಲಿಸುತಲಿ ಮೇಲ್ನೋಡುತ ಗೋಪರ । ದಂಬ ಬೆಂತಿಸುತಿರ್ದುದಾಗ ॥೮೯

ಆಸಮಯದೊಳಸುರಾಂತಕ ತನ್ನಯ । ದಾಸರಾರ್ತಿಯ ಕೆಂಡು ನಗುತ ॥
ಏಸು ಪೊತ್ತಿವನೊಡನಾಟವೆನುತ ಕಂಠ । ದೇಶವ ಪಿಡಿದ ಹಸ್ತದೊಳು ॥೯೦

ಕೊರಳ ಪಿಡಿಯಲು ದಾನವನಸು ದೇಹದಿಂ । ಪರಳಿತು ನಿಮಿಷಮಾತ್ರದಲಿ ॥
ಧರೆಗೆ ಬೀಳಲು ಗಿರಿಯಂತೆ ವಾತಾಸುರ । ನುರದೊಳಾಡಿದ ಮುರವೈರಿ ॥೯೧

ನೋಡಿದರಾಗ ಗೋವಳರು ಶ್ರೀಕೃಷ್ಣನ । ರೂಡಿಗಚ್ಚರಿಯ ಲೀಲೆಯನು ॥
ನಾಡಾಡಿ ದೈವವಲ್ಲವನ ಬಾಲಕನೆನು । ತಾಡಿಸಿದೆವು ಜಗತ್ಪತಿಯಾ ॥೯೨

ಇಂತು ಭ್ರಮಿಸುವ ನಂದಾದಿಗಳನು ಕಂಡ । ನಂತಮಹಿಮ ನಸುನಗುತ ॥
ಭ್ರಾಂತಿಯ ಬಿಡಿಸಿ ಮೋಹವ ತುಂಬಿದನು ತನ್ನೀ । ಕಾಂತಭಕ್ತರಿಗೆಂದಿನಂತೆ ॥೯೩

ನಂದಯಶೋದೆಯರಾಪರಮಾತ್ಮನ । ಕಂದ ಬಾಯೆನುತ ತಕ್ಕವಿಸಿ ॥
ಮಂದಿರಕ್ಕೈತಂದು ಮಗುಳೆ ಮಾಧವನನಾ । ನಂದದಿಂದಾಡಿಸುತ್ತಿಹರು ॥೯೪

ನಂದನ ಕಾಂತೆ ಮುಕುಂದನನೆತ್ತಿಕೊಂ । ಡಿಂದುವ ತೋರಿ ನಗಿಸುತ ।
ಚಂದಮಾಮನ ಕರೆ ಕಂದಯೆಂದೆನಲು ಗೋ । ವಿಂದ ಕರೆದನಂದು ಶಶಿಯಾ ॥ ೯೫
ಎರೆಯ ಕರೆದನೆಂದು ಪರಿತಂದನಿಂದು ಶ್ರೀ । ಹರಿಕರತಳದೊಳೊಪ್ಪಿರಲು ॥
ಸರಸಿಜನೇತ್ರೆ ಕಣ್ಮುಚ್ಚೆ ನಡುಗೆ ಸುಧಾ । ಕರನ ಬಿಟ್ಟನು ಕೃಷ್ಣ ನಗುತ ॥
ರೋಮರೋಮದೊಳಜಾಂಡಗಳ ಧರಿಸಿದ ಸು । ತ್ರಾಮವಂದಿತನ ತೊಟ್ಟಿಲೊಳು ॥
ಪ್ರೇಮದಿಂ ಮಲಗಿಸಿ ತೂಗ ಪಾಡುವಳಾ । ಮ್ನಾಯದ ಮಸ್ತಕಮಣಿಯಾ ॥ ೯೭
ಕಾಲರೀತಿಯನು ತಿಳಿದು ನಡೆವನ ಸಿರಿ । ಕಾಲಕಾಲಕೆ ಬಳೆವಂತೆ ॥
ಕಾಲಕರ್ಮಾತೀತ ಬಳೆದ ಗೋಕುಲದೊಳು । ಬಾಲಕೇಳಿಯಲಿ ರಂಜಿಸುತ ॥ ೯೮
ಪದರಚನೆಗಳಿಂದ ಚದುರವಾಕ್ಯಗಳಿಂದ । ಮಧುವ ಸೂಸುವ ದನಿಯಿಂದ ॥
ಮೃದುನಯನವರಸಭಾವಗರ್ಭಿತವಾದ । ಸದಮಳಕವಿತೆಯಂತೆಸೆದ ॥ ೯೯
ಅಂಬೆಗಾಲಿಡುತ ರತ್ನಸ್ಥಳದೊಳ್ಪುತನ್ನ । ಬಿಂಬವ ಕಂಡು ಕರೆಯಲು ॥
ಅಂಬುಜಾಂಬಕ ತನ್ನ ಕರೆದನೆನುತ ಬಂದು । ಕುಂಭಿನಿಂದು ಕೈಮುಗಿಯ ॥ ೧೦೦
ರಂಗುಮಾಣಿಕದವನಿಯೊಳು ಸಂಕರ್ಷಣ । ರಂಗಸಹಿತವಾಡುತಿರಲು ॥
ಗಂಗೆ ಯಮುನೆ ಸರಸ್ವತಿಯು ಕೂಡಿದ ವೇಣೀ । ಸಂಗಮವಾದುದಂಗಳವು ॥ ೧೦೧
ರತ್ನಸ್ತಂಭದೊಳು ಬಿಂಬಿಸಿದ ಕೃಷ್ಣನ ಕಂಡು । ಸುತ್ತ ನೋಡುತ ಬಲರಾಮ ॥
ಮತ್ತೆ ಬಂದನೆ ಹಿರಣ್ಯಕನು ಕೆಂಬಡೊಳಿಂದು । ಚೆತ್ತೈಸಲೇಕೆಂದ ನಗುತ ॥ ೧೦೨
ಬೇಳೆಮಾಲೆಯ ಧರಿಸಿದನು ಶ್ರೀಕೃಷ್ಣ ನೀ । ನೇಳವ್ವ ನೋಡು ಬಾಯೆನಲು ॥
ಲೋಲಲೋಚನೆ ರಾಮವಾಕ್ಯವ ಕೇಳಿ ಮೈ । ಹಾಳಿಯಿಂ ಬಂದು ನೋಡಿದಳು ॥
ಮಗನೆ ಬೇಳನು ಮುಟ್ಟಿದರೆ ಕಚ್ಚಿದಿಹುದೆಯಿಂ । ನಗುವೆ ನಾನೇವೇಳ್ವೆನೆನುತ ॥
ಮೃಗನೇತ್ರೆ ಬಳಲಿ ಬಾಯಾರಿ ಕೃಷ್ಣನ ಮೈಯ । ದುಗುಲದಿಂದೊರಸಿದಳಾಗ ॥
ಮಧುರಿಪುವಿನ ಮೂರ್ತಿಯನು ಶೋಧಿಸುತ ಮತ್ತೆ । ವದನವ ತೆರೆ ಕೃಷ್ಣಯೆನಲು ॥
ವಿಧಿಯ ಪೆತ್ತೈಯ ಬಾಯ್ದೆರೆಯ ಕಂಡಳು ಗೋಪಿ । ಪದುಮಭವಾಂಡಕೋ
[ಟಿಗಳಾ ॥ ೧೦೪

ಮಗುವೆಂದೆ ಬಗೆದೆ ನಿನ್ನನು ಕೃಷ್ಣ ನಿನ್ನಯ | ಬಗೆಯನರಿಯದಾದೆನಕಟಾ ! ||
ಖಗರಾಜನಳತೆಗೈದುವವೆ ಗುಬ್ಬಿಯ ಮರಿ | ನಗಧರ ರಕ್ಷಿಪುದೆನಲು ||೧೦೬

ತಾಯ ಮಾತನು ಕೇಳುತಾ ಅಂಬುಜಾಂಬಕೆ | ಮಾಯದ ನಗೆಯ ತೋರಿಸಲು ||
ಬಾಯೆನ್ನ ಕಂದಯೆನ್ನಯ್ಯಯೆನುತ ಗೋಪಿ | ಪ್ರಿಯದಿಂದೆ ಮಗನ ಮುದ್ದಿಪಳು ||

ಶಶಿಮುಖ ಮೊಸರ ಕಡೆಯುತಿರೆ ಬಂದಲ್ಲಿ | ಮಿಸುನಿದುಗಲದ ನಿರಿಯನು ||
ಕುಸುಮನಾಭನು ಪಿಡಿದೆಳೆಯುತ್ತಮ್ಮಯ್ಯ ನಾ | ಪಸಿದೆನಂಮೆಯ ನೀಪುದೆನಲು||

ಎಂದ ಮಾತನು ಕೇಳಿದಿರಲು ಕೋಪದಿ ಕೃಷ್ಣ |ಮುಂದಿಸ ಮೊಸರ ಚಟ್ಟಿಯನು||
ಬಂದಿನಿಸುಳಿಯದಂತುರುಳಿಸಿ ಬಳಿಕೆ ತಾ | ಬಂದನಂಗಳಕೆ ಬೀಗದೊಳು ||೧೦೯

ಪಿಂದಟ್ಟಿ ಬಂದಳಾನಂದನ ಕಾಂತೆ ಗೋ | ವಿಂದನ ಪಿಡಿವ ಭರದೊಳು ||
ಮಂದಿರದೊಳಗೆಲ್ಲ ಬಳಸಿ ಬಳಲಿಸುತಾ | ನಂದವಾಡಿದನು ತಾಯೊಡನೆ ||೧೧೦

ಮುಡಿಪೂಸರನಲುಗಲು ಕರ್ಣತಾಟಂಕ | ಜಡಿಯೆ ತಳುಕು ದುವ್ವಾಳಿಸಲು ||
ಕಡಗಕಂಕಣಕಾಂಚೀಧಾಮನೂಪುರರವ | ವಡಿಗಡಿಗೆಡೆಬಿಡದುಲಿಯೆ ||೧೧೧

ಕರಿಯ ಕೆತ್ತನಿಯ ಕಂಚುಕದೊಟ್ಟ ತೋಳಿನಿಂ | ದರವಿಂದಾಕ್ಷನು ತುಡುಕುತಿರೆ ||
ಕರಿಯುಮರಿಯನು ಮುದ್ದಿಪ ಕರೇಣವಿನಂತೆ | ಕರವ ನೀಡಿದಳು ಯಶೋದೆ ||

ಮುಟ್ಟಲರಿಯವು ಯೋಗಿಗಳ ನಿರ್ಮಲಚಿತ್ತ | ತಟ್ಟಾದುವರಸಿ ವೇದಗಳು ||
ನಿಟ್ಟಿಸಲಳವೆ ಬ್ರಹ್ಮಾದಿಗಳೀತನ | ನಟ್ಟಿ ಪಿಡಿದಳು ಯಶೋದೆ ||೧೧೩

ಕಟ್ಟಲೋಸುಗ ಕಡೆನೇಣ್ಗಳ ತರಸಿದ | ಳಷ್ಟಭೂತಿಗಳೊಡೆಯನನು ||
ಹೊಟ್ಟೆಗಳತೆಯ ನೋಡಲು ಸಾಲದಿರೆ ಮತ್ತೆ |ಕಟ್ಟಿದಳೊಂದು ದಾಮವನು||೧೧೪

ಇಂತು ಸಾಸಿರ ರಜ್ಜುಗಳ ತಂದು ನೋಡಲ | ನಂತಮಹಿಮೆಗಳವಡದು ||
ಎಂತಿದಕೆನುತ ನುಡಿದು ನಂದನ ಕಾಂತೆ | ಕಂತುಪಿತನ ನೋಡುತಿರಲು ||೧೧೫

ಜನನಿಯ ಕಂಡು ನಗುತ ಕೃಷ್ಣ ತನ್ನಯ | ತನುವ ಸಂಕುಚಿಸೆ ಯಶೋದೆ ||
ಕನಕದಾಮದೊಳು ಕಟ್ಟಿದಳೊರಳಿನೊಳಂದಾ | ಅನುಪಮಾನಂದಮೂರ್ತಿಯನು||

ಸುಮ್ಮನಿಂತಿರದಂಮೆಯನು ಕೇಳಿ ಕಾಡಲು | ಗುಮ್ಮಗೊಪ್ಪಿಸುವೆನೆಂದೆನುತ ||

ಗಮ್ಮನೆ ಮನವಾರ್ತೆಗಮ್ಮ ಸಾರಲು ಕೃಷ್ಣ । ಹಮ್ಮಿದ್ದು ಕಿತ್ತನೊರಳೆನು ॥
ಪರಿತಂದು ಕೃಷ್ಣ ಬಾಗಿಲೊಳಿರ್ಪ ತರುವಿನ । ಯಿರುಕೆವಲೆಡೆಗೆ ಸರಿಯಲು ॥
ಚರಣ ಸೋಂಕಲು ತರು ಮುರಿದು ಬಿದ್ದುದು ಗೊಲ್ಲ । ಪುರಬೆರಗಾಗಿ ಜಜ್ಜರಿಸಿ॥
ಭ್ರಮರಕುಂತಳೆ ಕೇಳು ಧನದನಂದನರಿರ್ವ । ರಮರಮುನಿಯ ಶಾಪದಿಂದ ॥
ಅ ಮಳಾರ್ಜುನಾಖ್ಯತರುಗಳಾಗಿ ಜನಿಸಿರ್ದು । ಕಮಲನಾಭನ ಕಂಡರಾಗ ॥೧೧೯
ಆಪದ್ಬಂಧು ನಿನ್ನಮಿತಪ್ರಭಾವದ । ಶ್ರೀಪಾದ ಸೋಂಕಲಿಂದೆಮಗೆ ॥
ಶಾಪವಿಮೋಚನವಾದುದೆಂದಡಿಗಳಿ । ಗಾಪುರುಷರು ವಂದಿಸಿದರು. ॥೧೨೦
ಕರುಣಾಳುಗಳ ದೇವನವರೊಡನೆಂದನು । ವರಮುನಿ ನಾರದ ನಿಮಗೆ ॥
ಪರಮಾನುಗ್ರಹವ ಮಾಡಿದ ಸುಖವೊಳು ನಿಮ್ಮ । ಪುರಕೆ ಸಾರುವದೆಂದ ನಗುತ॥

ಇಂತೀ ಶ್ರೀ ಬಾಲವಿಲಾಸಶತಕಂ ಸಂಪೂರ್ಣಂ.

—ವೇಣುವಿಲಾಸ ಶತಕಂ—

———o———

ಬಂದನು ನಂದ ನಂದನನ ಕಂಡಳಲು । ತ್ತಿಂದುಮುಖಿಯು ಜರೆದೆಂದ ॥
ಮಂದಮತಿಯೆ ಭವಬಂಧರಹಿತನ ನೀಂ । ಬಂಧಿಸಲೇತಕೆಂದೆನುತ ॥೧

ತನಯುನನೆತ್ತಿ ತಕ್ಕವಿಸಿ ಮುಂಡಾಡುತ । ಮಣಿಮಂಚದೊಳಗೆ ಮಂಡಿಸಿದ ॥
ಅನುಪಮನೊಡನಾಡುತಿಹಪರಸುಖಗಳ । ಗಣಿಸದಿರ್ದನು ನಂದಗೋಪ ॥೨

ಧಾರಿಣಿಯೊಳಗಡಿಯಿಡುತ ಕುಮಾರಕಂ । ಬೀರವರಾಗೊಲ್ಲಪುರದಿ ॥
ಕೇರಿಕೇರಿಯೊಳು ಗೋವಳರ ಮನೆಯ ಪೊಕ್ಕು । ಸೂರೆಗೊಂಬರು ಕ್ಷೀರದಧಿಯಾ॥

ಕರೆಯದ ಮುನ್ನ ತುರುವಿಗೆ ಕರುವ ಬಿಟ್ಟು । ಮರೆಗೊಂಡು ನೋಡಿ ನಗುವರು ॥
ಕರೆವ ಪೆಣ್ಗಳ ಜಡೆಗಳನು ವತ್ಸದ ಬಾಲ । ಕರಿಯದಂದದಿ ಗಂಟಿಕ್ಕುವರು ॥೪

ನೆಲವಿನೊಳಿಹ ಬೆಣ್ಣೆಯನು ತುಡುಕುತೆ ತಮ್ಮ । ಕೆಳೆಯರಿಗಿತ್ತು ಮಿಕ್ಕುದನು ॥
ಒಳಗಿಹ ಸೊಸೆಯ ಬಾಯೊಳು ಮೆತ್ತಿ ತುಡು ತಿಂದ। ವಳಿವಳಿನುತೆ ದೂರಿಕ್ಕುವರು॥

ಬಾಳೆದಿಂಡಿನೊಳು ಬೇಳನು ತುಂಬಿ ಪೂವೆಂದು । ಬಾಲೆಯರಿಗೆ ಕೊಡಲದನು ॥
ಕೇಳೀವೇಳೆಯೊಳು ಮುಡಿವೆವೆಂದು ಮಂಚದ । ಮೇಲಿರಿಸುವರು ದಿಂಡುಂಗಳಾ ॥೬

ದಂಪತಿಗಳು ಮಂಚದೊಳು ಪವಡಿಸುವಲ್ಲಿ । ಸಂಪಗೆಯಲರಿವೆಂದೆನುತ ॥
ಸೊಂಪಿನಿಂ ದಿಂಡನಳಿಯಲು ವೃಷ್ಟಿಕಗಳ । ಗುಂಪು ಮುತ್ತುವವಂಗಗಳನು ॥೭

ತತ್ತರಗೊಳುತ ಬಿತ್ತಲೆಬಂದಂಗಳದೊಳು । ನ್ಮತ್ತರಂದದಿ ಕುಣಿಯುತಿರೆ ॥
ಜಿತ್ತಜಪಿತ ನಗುತಿದಿರೆ ಕುಣಿಯೆ ತಲೆ । ಗುತ್ತಿ ನಾಚುವರಬಲೆಯರು ॥೮

ವಾರಿಜಾಕ್ಷನ ಲೂಟಿ ಮೀರಿತು ಗೊಲ್ಲರ । ಕೇರಿಗಳೊಳು ಮನೆಗಳಲಿ ॥
ನಾರಿಯರೆಲ್ಲವೊಂದಾಗಿ ಯಶೋದೆಗೆ । ದೂರಿದರಂದು ಶ್ರೀಹರಿಯಾ ॥೯

ನಾರೀಮಣಿಯೆ ಕೇಳು ಗೋಕುಲದೊಳಗಿರ । ಲಾರೆವಚ್ಯುತನ ಲೂಟಿಯೊಳು ॥
ಸೂರೆಗೊಂಬನು ದಧಿಕ್ಷೀರಗಳನು ಮತ್ತೆ । ಕೋರಿವೆಣ್ಗಳ ಕಾಡಿಸುವನು ॥೧೦

ಎಂದೊಡೆಂದಳು ನಂದಕಾಂತೆ ಮಂದಿರದೊಳು । ಕಂದೈಯ ಮೊಲಗಿಸೋಗ ॥
ತಂದಿರಿ ದೂರ ಬರಿದೆ ನಮ್ಮ ಕೃಷ್ಣನ । ತಂದು ತೋರಿಸಿ ನಿನಾಮಂ ॥೧೧
ಎನಲೊಪ್ಪಿಕೊಂಡು ಬಂದರು ಕಾಂತೆಯರು ತಮ್ಮ । ಕಾನಿಗುಂಟರ್ಕ ಕೃಷ್ಣನನು ॥
ವನಿತೆಯರೆತ್ತಿಕೊಂಡೈದೆ ಬೀದಿಯೊಳು ತಾ । ನನಿತು ಕೃಷ್ಣನ ಮಯ ಲಾಯಿತು ॥
ಪುಂಡರೀಕಾಕ್ಷನನೆತ್ತಿ ಕೊಂಡ್ಯೈತರ್ಪ । ಮಿಂಡಿವೆಣ್ಣಳ ತಂತಗಾನು ॥
ಕೆಂಡು ಯಶೋದೆ ತನ್ನಯ ಕರದೊಳಗಿಸ । ಲಂಡಕೃಷ್ಣನ ನೋಡಿ ನಗುತ ॥೧೩
ಇನಿತರೊಳಾವ ಕೃಷ್ಣನು ಲೂಟಿಸಿದ ನಿಮ್ಮ । ನೆನುತ ಕೇಳಿದರು ಯಶೋದೆ ॥
ಅನುಪಮಪುಣ್ಯಾಸದನೆಗೊಂದರಾಗೋಪ । ವನಿತೆಯರಂದು ಕೈಮುಗಿದು ॥೧೪
ಅರಿಯದಾದೆವು ನಿನ್ನ ಕುವರನ ಮಹಿಮೆಯ । ನರನೆಂದೆ ಮರುಳಾದೆವಕಟ ! ॥
ಹರಿಮಯನಾಯ್ತು ಗೋಕುಲವೆಲ್ಲ ಕೃಷ್ಣನ । ಪರಿಯನಾರಿವರೆಂದೆನುತ ॥೧೫
ಹರಿಯ ಮಂಗಳಮೂರ್ತಿಯನು ಬಿಡಲಾರದೆ । ಉರದೊಳಗಪ್ಪಿ ಮುದ್ದಿಸುತ ॥
ತರುಗಾತಿಯರು ಮನೆಗುಯ್ದರಿತ್ತಲು ಗೋಪ । ಮುರಹರನೊಡನಾಡುತಿರಲು ॥
ಬಂದು ದಿನಕ ನಂದನಲ್ಲಿಗೆ ಬಂದುಪ । ನಂದನೆಂಬವನಾಲೋಚಿಸಿದ ॥
ವೃಂದಾವನೋಪಕಂಠದಿ ಮಂದಿರವ ಮಾಳ್ಪ । ದೆಂದನಿಲ್ಲಿರಲಾಗದೆನುತ ॥೧೭
ಎನಲು ಲೇಸೆನುತ ಗೋವಳರು ಸರಕುಗಳ । ನನುಗೊಳಿಸಿದರು ಭಂಡಿಯೊಳು ॥
ವನರುಹಾಂಬಕನ ಪಾಡುತ ನಡೆದರು ಬೃಂದಾ । ವನದ ಠಾವಿನ ಗೋಕುಲಕೆ ॥
ಇಂತು ಗೋಕುಲದೊಳಗಿರಲು ಲಕ್ಷ್ಮೀಕಾಂತ । ಚಿಂತಿಸಿದನು ಚಿತ್ತದೊಳಗೆ ॥
ಕಾಂತಾರದೊಳಗಿಹ ಸಚರಾಚರಂಗಳ । ಸಂತಸಗೊಳಿಸಬೇಕೆನುತ ॥೧೯
ವತ್ಸಪಾಲಕವೇಷವನು ಧರಿಸಿದನು ಶ್ರೀ । ವತ್ಸಲಾಂಛನ ಮಕ್ಕಳೊಡನೆ ॥
ವತ್ಸಂಗಳ ಕಾವ ನೆವದಿ ಬೃಂದಾವನ । ಕುತ್ಸವವನು ಮಾಹುತಿರ್ದ ॥೨೦
ಸುಮನಸಾಂಬೋಳಿಕಾರೋಹಣಗೈದನು । ಕಮನೀಯಮೂರ್ತಿ ನಲವಿನಿಂ ॥
ಕ್ರಮದಿಂದಲೂಳಿಗಗಳನು ಕೈಕೊಂಡು ಸಂ। ಭ್ರಮದೊಳ್ಳೆದಿತು ಗೋಪಾರ್ಭಕರು ॥
ಹಡಪ ಕಾಳಾಂಟಿ ಕುಂಚದ ಬೀಸಣಿಗೆಯು ವಂ । ಗಡ ವಿಢಾಳಿಪ ಚಾಮರಗಳಾ ॥

ಒಡೆಯ ಪರಾಕು ಪಾಡಾವಧಾನಗಳೆಂದು । ನುಡಿವ ಕಟ್ಟಿಗೆಕಾರರಿಂದ ॥೨೨
ಬಿಡದೆ ಪೂತನಿಶಕಟಾದಿದಾನವರನು । ಮಡುಹಿದ ಬಿರುದಾಂಕನೆಂದು ॥
ಕಡುಸುಮ್ಮಾನದೊಳುಗ್ಗಡಿಪ ವಂದಿಮಾಗಧ । ಗಡಣವೈದಿತು ಹರಿಯೊಡನೆ ॥೨೩
ಕೊಂಬುಕೊಳಲುತಿತ್ತಿಷಾದ್ಯರವಗಳಿಂದ । ಮುಂ ಬೀಣೆಯವರು ನಡೆಯಲು ॥
ಅಂಬುಜನಾಭನೆಯ್ತಂದ ಬೃಂದಾವನ । ವೆಂಬ್ಯಕಾನನಕೊಲವಿನಲಿ ॥೨೪
ಆಮಹಾಮಹಿಮನಂದಳವನಿಳಿದನು ಶ್ರೀ । ಧಾಮನ ಹಸ್ತಲಾಗಿನಲಿ ॥
ಮಾಮರದಡಿಯಲರಿನಗದ್ದಿಗೆಯೊಳು ಸು । ತ್ರಾಮವಂದಿತ ಮಂಡಿಸಿದನು ॥೨೫
ಆಮಹಾಲಕ್ಷ್ಮಿಯೊತ್ತುವ ಪಾದಗಳನು ಶ್ರೀ । ಧಾಮನೆಂಬವನೊತ್ತುತಿರಲು ॥
ರಾಮನ ನೋಡಿ ನಗುತ ತೋರುತಿರ್ದನು । ರಾಮಣೀಯಕವನಸಿರಿಯಾ ॥೨೬
ಅಣ್ಣ ನೋಡೀ ತರುಗಳು ಸತ್ಪುರುಷರಿಗೆ । ಪಣ್ಪಲಗಳನುಣಬಡಿಸಿ ॥
ತಣ್ಣನೆ ನೆಳಲನಿತ್ತತಿಥಿಪೂಜೆಯಮಾಳ್ಪ । ಪುಣ್ಯಾತ್ಮರಂತೊಪ್ಪುತಿವೆಕೊ ॥೨೭
ಇದೆ ಯಮುನೆಯನು ನೋಡಣ್ಣ ಸಂಸಾರದ । ಕಡಡನು ತಿಳಿದರಿವಾಂತ ॥
ಸದಮಳಪುರುಷರ ಹೃದಯದಂತಿದೆ ನದಿ । ಯುದಕನಿರ್ಮಲವನೇನೆಂದೆ ॥೨೮
ಹಿಂದಣ ಸುಖದುಃಖಗಳನೆಣಿಸದೆಯರಿ । ವಿಂದ ಮುಂದಣ ಮಾರ್ಗವಿಡಿದು ॥
ಬಂಧರಹಿತರಂತೆ ಹಿಂದು ನೋಡದೆ ನದಿ । ಮುಂದೆ ಪರಿವುದು ನೋಡೆಂದ ॥೨೯
ಇಂತು ಶ್ರೀಕೃಷ್ಣ ಕಾಂತಾರವೈಭವವನೇ । ಕಾಂತಭಕ್ತರಿಗೆ ತೋರಿಸುತ ॥
ಸಂತಸದಿಂದಾಡುತಿರಲು ಕೆಂಸನ ದೂತ । ನಂತರಿಕ್ಷದಿ ನೋಡುತಿರ್ದ ॥೩೦
ಇರಲು ವತ್ಸಾಸುರನೆಂಬ ದಾನವ ಬಂದು । ಕರುವಿಂಡಿನೊಳು ಬೆರೆದಿರಲು ॥
ಹರಿ ತಿಳಿದವನ ಕಾಲ್ವಿಡಿದಪ್ಪಳಿಸಲು ಪ । ಲ್ಗಿರಿದು ಬಿದ್ದನು ಖಳ ಧರೆಗೆ ॥೩೧
ಕಂಡರಾಗೋಪಕುಮಾರರು ಕೃಷ್ಣನು । ದ್ದಂಡಮೇಗದ ಪರಾಕ್ರಮವಾ ॥
ಪುಂಡರೀಕಾಕ್ಷನ ಪೊಗಳುತ ತುರುಗಳ । ಹಿಂಡ ಹೊಡೆದರು ನೀರ್ಗುಡಿಸಿ ॥೩೨
ನೀರ ತಡಿಯ ವೃಕ್ಷಾಗ್ರದೊಳು ಬಿಳ್ಳಕ್ಕಿಯಾ । ಕಾರದಸುರ ನೋಡುತಿರ್ದು ॥
ಭೋರೆಂದು ಮೊರೆಯಲರ್ಭಕರು ಕಂಡಂಜುತ । ವಾರಿಜಾಂಬಕ ನವೋಯೆನಲು ॥

ಶರಣಾಗತಜನಸುರಧೇನು ಬಂದಾಗ । ದುರುಳಬಕನ ನೋಡಿ ನಗುತ ॥
ಪುರುಳೆ ಮಕ್ಕಳನಂಜಿಸುವೆ ಯಾಕೆ ನಾನಿಹೆ । ನೊರಲು ನೋಡುವೆನೀಗಳೆಂದ॥೩೮
ಎನಲು ಪಕ್ಷವೊಳೆರಗಿದ ಹರಿಯುರವನು । ದನುಜ ಕೋಪದೊಳೆ ಬೊಬ್ಬಿರಿದು ॥
ವನಜಾಕ್ಷ ಲೀಲೆಯಿಂದವನ ವಕ್ಷವ ಸೀಳಿ । ಯುಣಬಡಿಸಿದ ಭೂತತತಿಗೆ ॥೩೯
ಸುರರು ಪೂಮಳೆಗರೆದರು ಗೋಪಾರ್ಭಕರೆಲ್ಲಾ । ಹರಿಮೂರ್ತಿಸುಧೆಯ ಸೇವಿ
[ಸುತ ॥
ಕರುಣಾರ್ಣವನೆ ನೀನಿರಲು ಭಯವಾವುದೆಂ । ದೆರಗಿದರಚ್ಯುತನಡಿಗೆ ॥೩೬
ಹರಿಯಿಂದಳಿದ ದಾನವರಿಗೆ ಮಾರ್ಗವ ಕೊಡು । ಪುರುಬ ತಡೆಯಲಾರೆನೆನುತ ॥
ತರಣಿಮಂಡಲ ಪಡುಗಡಲ ಸೊರಲು ಕೃಷ್ಣ । ತುರುಗಾಹಿಗಳ ಸನ್ನೆಗೆಯ್ದ॥೩೭
ಕೊಂಬುಕೊಳಲುರವದಿಂದ ವತ್ಸಂಗಳ । ನಂಬುದದನಿಯಿಂದ ಕರೆಯೆ ॥
ಅಂಬುಜಾಂಬಕ ಬಂದನೆನುತಲೆ ಗೋಪನಿ । ತಂಬಿನಿಯರು ನೋಡುತಿರಲು ॥೩೮
ಚೆಲುವರಾಯನು ಗೋಕುಲವ ಪೊಕ್ಕ ಭಕ್ತೈಕ । ಜ್ವಲಜದೊಳಗೆ ಪುಗುವಂತೆ ॥
ನಿಳಯದಿಂದೋಡಿ ಬಂದಪ್ಪಿದಳಾನಂದ । ಲಲನೆಯರಿವಿನರಗಣಿಯಾ ॥೩೯
ಆದಿವರಾಹರೂಪದೊಳುದಧಿಗಳಡಿ । ಗಾದವೀರೋಮಕೂಪದಲಿ ॥
ಆದಯಾನಿಧಿಯ ತೊಳೆದಳು ಯಶೋದೆ ವಿ । ನೋದದಿಂ ಕರಮಾತ್ರೋದಕದಿ॥೪೦
ಅಂಬರವರೆಯಡಿಗಳೆದ ಮಹಾತ್ಮನಿ । ಗಂಬರವನು ಪೊದಿಸುವಳು ॥
ಪೊಂಬಟ್ಟಲೊಳು ಕ್ಷೀರವನು ಕುಡಿಸುವಳುಕ್ಷೀ। ರಾಂಬುರಾಶಿಯ ಶಯನನಿಗೆ ॥೪೧
ಸೃಷ್ಟಿಗೊಡೆಯನ ಪುಟ್ಟಿಸಿದ ಮಗುವ ಮಣಿ । ದೊಟ್ಟಿಲೊಳಿಟ್ಟು ತೂಗುವಳು॥
ಮಟ್ಟುಮೀರಿತು ದಯವೀಯಶೋದೆಯಲಿ ತಾ । ನೆಷ್ಟು ಸುಲಭನೊ ಭಕ್ತರಿಗೆ ॥
ಹರಿ ನಿದ್ರೆದಳಿದು ಕಣ್ದೆರೆಯೆ ತಾವರೆಗಳಂ । ದರಳಿದವರಸಲಾರೊಡನೆ ॥
ಹರಿಯಾನನದ ಕಾಂತಿಗರೆಯಾಗಿ ರವಿ ಪೂರ್ವ । ಗಿರಿಗುಪ್ಪರಿಸಿದ ಲಘುವಿನಿಂ॥೪೩
ಮಂಗಳಮಜ್ಜನಗೈದು ಪಣೆಯೊಳು ಬೆ । ಡಂಗಿನಿಂ ರಚಿಸಿ ಕಸ್ತೂರಿಯಾ ॥
ರಂಗನ ಶಿಖಿಗೆ ಸುತ್ತಿದ ಮುತ್ತುಮಲಕಿನ । ಸಿಂಗರಗಳನೇನನೆಂಬೆ ॥೪೪

ಕಡಲ ಕುವರಿಯೆರೆಯನು ಕಿವಿಗಿಟ್ಟನು । ಜಿಡುಮುತ್ತಿನೊಂಟಿಬಾವುಲಿಯಾ ॥
ಕಡಗ ಕಂಕಣ ವುಳಿಯುಗುರು ಪೊನ್ನಂದಿಗೆ । ಯೊಡನುಡಿಗಂಟಿಗಳುಲಿಯೆ ॥೪೫
ಪೊಡೆಗೆ ಸುತ್ತಿದ ಪೀತಾಂಬರ ಕರತಳದಿ ತಾಂ । ಪಿಡಿದ ಕೊಳಲ ಸೊಬಗಿಂದ ॥
ಷಡುರಸಾನ್ನವನು ಭುಂಜಿಸಿ ಬಲಸಹ ಜಗ । ದೊಡೆಯ ನಡೆದ ವೃಂದಾವನಕೆ ॥
ಅಂಬುಜಾಂಬಕನಾಡುತಿರೆ ಬನದೊಳಗೆ ಪ್ರ । ಲಂಬನೆಂಬಸುರನ್ನೈತಂದು ॥
ಪೊಂಬಿಯೊಳರ್ಭಕನಂತೆ ರಾಮನ ಪಿಡಿ । ದಂಬರಕಡರಿದನಾಗ ॥೪೭
ನಿಟ್ಟಿಸಿ ದನುಜನಾಟವ ಕೆಡು ರಾಮ ತಾ । ನಟ್ಟಹಾಸದೊಳು ಗರ್ಜಿಸುತ ॥
ಮುಟ್ಟಿಯಿಂದೆರಗಲಾಕ್ಷಣದಿ ದಾನವಸಿರ । ವಟ್ಟಿಯೊಳಡಗತೇನೆಂದೆ ॥೪೯
ಪೋಡದಿಂದಿಳಿವ ರವಿಯುವೊಲು ರಾಮ ಬಂ । ದಾಡುವೆಡೆಯೊಳು ನಿಂದಿರಲು ॥
ನೋಡಿ ನಗುತ ಕೃಷ್ಣನೆಂದ ದಾನವ ನಿಮ್ಮೊ । ಳಾಡಬಂದರೆ ಕೊಂದಿರೆನುತ ॥೪೯
ಸರಸವಾಡಲು ಬಾರದಹಿಯೊಡನೆಂಬುದ । ಸ್ಮರಿಸದೆ ಖಳ ನಿಮ್ಮೊಳಾಡಿ ॥
ವಿರಸವಡೆವನಕೆಟನೆಲು ನಗುತ ರಾಮ । ನಿರಿಸಲುಹುದು ನಿಮಗೆಂದ ॥೫೦
ಮೊಲೆಯನಿತ್ತವಳ ಕೊಂದೆವೆ ಬಾಗಿಲೊಳು ತಂಪು । ನೆಳಲಾದ ತರುವ ಮುರಿದೆವೆ ॥
ಚಲರ ಮನೆಯುಲಿ ಪಾಲ್ಬೆಣ್ಣೆಯ ಕಳಲೆವು । ಗಳವೆ ನಿಮ್ಮವೊಲೆಂದ ರಾಮ ॥೫೧
ರಾಮಕೃಷ್ಣರು ವಿನೋದದೊಳಾಡುತಿರಲು ಶ್ರೀ । ದಾಮನೆಂಬವ ಪರಿತಂದು ॥
ಈಮಹಾರಣ್ಯದೊಳಧಿಕತಾಳೀವನ । ರಾಮಣೀಯಕತರವೆಂದ ॥೫೨
ಎನಲು ಲೇಸೆನುತ ತಾಳೀವನಕೈದಿದ । ರನುಪಮರರ್ಭಕರೊಡನೆ ॥
ಬನಕೆ ಬಂದಂತೆ ಬನದೊಳು ಲೂಟಿಸುತಿರೆ । ದನುಜ ಧೇನುಕ ಕೆಂಡನಾಗ ॥೫೩
ಗಾರ್ದಭದಂತೆ ಬೊಬ್ಬಿಡುತ ದಾನವ ಬಂದು । ಸಾರ್ದನಚ್ಯುತನ ಸಮ್ಮುಖವಾ ॥
ಊರ್ಧ್ವಲೋಕಕೆ ಕಳುಹಿದನು ರಕ್ಕಸನ ಜ । ನಾರ್ದನ ನಿಮಿಷಮಾತ್ರದಲಿ ॥೫೪
ಕರುವಿಂಡುಗಳನು ಮೆಯಿಸುತ ಗೋವಳರ ಕು । ವರರು ಕೆಂಡರು ಮಹಾದ್ಭುತವ ॥
ಉರಗನ ವದನವೆಂಬುದನರಿಯದೆ ಪೊಕ್ಕ । ರಿರದೆ ಗಿರಿಯ ಗುಹೆಯನುತ ॥೫೫
ಅಘನೆಂಬ ದಾನವನಹಿಯ ರೂಪದಿ ಬಂದು । ಮುಗಿದನರ್ಭಕರನೆಂದೆನುತ ॥

ನಗಧರ ಬಂದು ದಾನವನ ಸಂಹರಿಸಿ ಪ । ನ್ನಗಗರ್ಭಗತರನೀಕ್ಷಿಸಿದ ॥೪೬
ಸಚ್ಚಿದಾನಂದವಿಗ್ರಹನೀಕ್ಷಿಸಲು ಮಕ್ಕ । ಳೆಚ್ಚತ್ತು ಕೆಂಡರಚ್ಯುತನಾ ॥
ಮುಚ್ಚುಮರೆಯೆ ನಿನ್ನ ಕರುಣದಳತೆಗಿದೇ । ನಚ್ಚರಿಯೆನುತೆರಗಿದರು ॥೪೭
ತಂದೆಗಳಿರ ನೀವು ನೊಂದಿರಿ ಖಳನಿಂದ । ಲೆಂದು ಗೋವಿಂದನಪ್ಪಿದನು ॥
ತೆಂದ ಬುತ್ತಿಯನುಣಲೆಂದು ಮುಕುಂದ ಕಾ । ಳಿಂದಿತಟಕೆ ಕರೆತಂದ ॥೪೮
ಭೋಜನಮುಂಡಲದೊಳು ಮುಂಡಿಸಿದರು ಸ । ರೋಜನೇತ್ರನ ಸುತ್ತುವರಿದು ॥
ರಾಜೀವದಳದ ಮಧ್ಯದ ಕುಸುಮದವೊಲು । ಮೂಜಗದೊಡೆಯ ರಂಜಿಸಿದ ॥೪೯
ಕಲಸನ್ನಗಳ ಕರತಳದ ಮಧ್ಯದೊಳಿಟ್ಟು । ಬಳಸಿ ಬೆರಳನೆಡೆಗಳಲಿ ॥
ಪಲವು ತೆರದ ವ್ಯಂಜನವನಳವಡಿಸಿ ತಾ । ಕೆಳೆಯರಿಗಿತ್ತು ತುತ್ತುಗಳಾ ॥೫೦
ಅವರ ಕೈತುತ್ತ ತಾ ತೆಗೆದು ಸವಿಯುತ ಮ । ತ್ತವರಿಗೀಯುತ ಪ್ರಸಾದವನು ॥
ವಿವರ ಮೀರಿತು ಸ್ವಾಮಿಭೃತ್ಯಭಾವಗಳಾಗ । ದಿವಿಜವಂದಿತಗೇನನೆಂದೆ ॥೫೧
ಆಸಮಯದೊಳಾಗಸದ ಬ್ರಹ್ಮಾದಿಗಳೆಂದ । ರೀಸನಕಾದಿಭಕ್ತರೊಳು ॥
ಏಸು ಧನ್ಯರೊ ಗೋಪಸುತರ ಸೌಭಾಗ್ಯವು । ಶೇಷಾದಿಗಳಿಗರಿದಕಟಾ ! ॥೫೨
ಎನುತಜ ತನ್ನ ಮಾಯುವನು ತೋರಿಸಿದನಂ । ದನುಪಮಮಾಯಾಧೀಶನಲಿ ॥
ಬನದೊಳಗಿರ್ದ ವತ್ಸಗಳನಂತರ್ಧಾನ । ವನು ಮಾಡಿದನು ನಿಮಿಷದೊಳು ॥೫೩
ಹರಿಯ ಸನ್ನಿಧಿಯೊಳಿರ್ದರ್ಭಕರೆಲ್ಲರು । ಕರುವಿಂಡನರಸಬೇಕೆನುತ ॥
ಸರಿಯುತಿರಲು ನೀವಿಲ್ಲಿಹುದೆಂದು ನೇಮಿಸಿ । ಕರುಣಾಳು ಪೊರಟನಾಕ್ಷಣದಿ ॥೫೪
ಬಂದು ಕೈಯೊಳು ಕಲಸನ್ನದ ತೆರಳೆ ಮ । ತ್ತೊಂದು ಕೈಯಲಿ ಕೊಳಲಾಂತು ॥
ಬೃಂದಾವನದೊಳರಸಿದನು ವತ್ಸಂಗಳ । ನೈಂದವ ಮನುಜಲೀಲೆಯಲಿ ॥೫೫
ಅಂತರೊಳರ್ಭಕರನು ಕಾಣದೆ ಕೃಷ್ಣ । ನಿನಿತು ಪೊಮ್ಮನ ಕಾರ್ಯವೆನುತ ॥
ಅನುಸಮನಂಗೀಕರಿಸಿದನಂದಗಣಿತ । ಘನಚೆನ್ಮಯಾನಂದಾಕೃತಿಯಾ ॥೫೬
ಆವಾವ ಬಣ್ಣದ ಕರುಗಳಾವನು ತಾನೆ । ಕಾವ ಗೋಪರ ಸುತರಂತೆ ॥
ಶ್ರೀವರನಿತು ತಾನೇಳಿದನದ್ಭುತ । ವೇವೆಳ್ವೆನಮಮ ! ಲೀಲೆಗಳಾ ॥೫೭

ಎಂದಿನಂತರ್ಭಕರೊಡನೆ ವತ್ಸಂಗಳ । ಸಂದೋಹವೆರಸಿ ಗೋಕುಲಕೆ ॥
ಬಂದನಚ್ಯುತನಿಳೆಯುಕೆ ಗೋವಳರು ತಮ್ಮ । ಮಂದಿರಗಳನು ಸಾರಿದರು ॥೬೪
ಕರುವಿಂಡುಗಳೊಳು ಮಮತೆ ಘನ ತುರುಗಳ್ಗೆ । ಕರುಗಳಿಮ್ಮಡಿ ತುರುಗಳೊಳು॥
ಮರುಕ ಮೀರಿತು ಮಕ್ಕಳೊಳು ಗೋಪಿಯರಿಗಿಂತು । ವರುಷವೊಂದಾದುದ
[ಷ್ಟರೊಳು ॥೬೯
ಗಿರಿಗುಹೆಯೊಳು ಕರುವಿಂಡು ಮಕ್ಕಳು ಸಹಿ । ತಿರಿಸಿ ತನ್ನೊಳು ತಾನೆ ನಗುತ ॥
ಹರಿಯೇನು ಮಾಡಿಕೊಂಡಿಹನೊ ನೋಡುವೆನೆಂದು । ಪರಮೇಷ್ಠಿ ಕಂಡನ
[ಚ್ಯುತನಾ ॥೭೦
ಆಸಮಯದೊಳಸುರಾರಿ ತೋರಿದ ಪರ । ವಾಸುದೇವಸ್ವರೂಪವನು ॥
ಸಾಸಿರಕೋಟಿ ನೇಸರ ಧಿಕ್ಕರಿಪ ಮೂರ್ತಿ । ಸಾಸಿರಕೋಟಿ ರಂಜಿಸಿತು ॥೭೧
ಒಂದೊಂದು ಮೂರ್ತಿ ಸನ್ನಿಧಿಯೊಳಿಹದು ಕೋಟಿ।ಯಿಂದುಶೇಖರಬ್ರಹ್ಮಾದಿಗಳು॥
ಇಂದಿರೆಸಹಿತಲಸಂತಪೀಠದೊಳರ । ವಿಂದಲೋಚನನೊಪ್ಪುತಿರಲು ॥೭೨
ಪರಮಪುರುಷನ ತೇಜೋಮಯಶರಧಿಯ । ತೆರೆಯ ಕಡೆಯ ತುಂತುರಿನೊಳು ॥
ಪರಮೇಷ್ಠಿಯಾಳಿ ಮುಳುಗುತ ಭಯದೊಳಾಗ। ಸರಸಿಜಾಕ್ಷನ ಸ್ತುತಿಗೈದ॥೭೩
ಕರುಣಿಸೆನ್ನನು ಕಮಲಾಕಾಂತ ಕಮನೀಯ । ಕರ ನೀಲಮೇಘನಿಭಾಂಗ ॥
ಶರಧಿಶಯನ ಶಕಟಾದಿದಾನವಹರ । ಸುರಮುನಿವಂದ್ಯ ನಮಸ್ತೇ ॥೭೪
ನಿನ್ನ ಮಾಯಾಮೋಹದಿಂದ ಭ್ರಮಿತನಾದೆ । ನೆನ್ನಪರಾಧಶತವನು ॥
ಮನ್ನಿಸಿ ಕೃಪೆಯ ಮಾಳ್ಪದು ದೇವದೇವ ಪ್ರ । ಸನ್ನನಾಗೆನುತೆರಗಿದನು ॥೭೫
ತನುವೆಂಬುದಿಂದ್ರಿಯಂಗಳ ನೆರವಿಯೆ ಮತ್ತಾ । ಮನವ ನೆಮ್ಮಿಹುದಿಂದ್ರಿಯಗಳು॥
ಮನಕೆ ಚೈತನ್ಯಚೇತನಸಾಕ್ಷಿ ನೀನಿರೆ । ತನುವಿಗಾವುದು ಸ್ವತಂತ್ರಗಳು ॥೭೬
ಆಡಿಸಿದಂತಾಡುವೆನ್ನನೀಪರಿಯೊಳು । ಕಾಡಿಸಲೀತಕಿಂತಕಟಾ ! ॥
ನೋಡಲೆನ್ನಳವೆ ನಿನ್ನಮಿತತೇಜವ ಕೃಪೆ । ಮಾಡು ಮುನ್ನಿನ ಗೋಪಾಕೃತಿಯಾ॥
ಎನಲು ನಗುತ ತನ್ನ ತನಯನಾರ್ತಿಯ ಕಂಡು । ಮನುಜಲೀಲೆಯನಂಗೀಕರಿಸಿ ॥

ವನರುಹಾಂಬಕನಲ್ಲಿ ಗೈತಂದು ಬಿನ್ನಹ । ವನು ಮಾಡಿದನಜ ಹರಿಗೆ ॥೭೪

ಒಲ್ಲೆನೀಪಾರಮೇಷ್ಯವ ಗೋಪಸುತರೊಡ । ನಿಲ್ಲಿ ಸೇವೆಯ ಮಾಳ್ಪೆ ನಿಮಗೆ॥
ಸೊಲ್ಲುಮಾತ್ರದ ನುಡಿಯಲ್ಲ ನೀವರಿಯದು । ದಿಲ್ಲ ಕೈಪೆಯ ಮಾಳ್ಪುದೆಂದ ॥೭೯

ಎಂದು ಮಾತನು ಕೇಳುತಿಂದಿರೆಯರಸನಾ । ನಂದನಿಂದಪ್ಪಿದನಜನಾ ॥
ಕಂದ ನಿನ್ನನು ಮಮತೆಯಲನುಗ್ರಹಿಸಿದೆ । ವೆಂದಿದಕಂಜಬೇಡೆಂದ ॥೮೦

ಎನುತ ಸಂತೈಸಿ ವಿಧಿಯನು ಕಳುಹಿ ಕೃಷ್ಣ । ಬನದೊಳಾಕರುವಿಂಡುಸಹಿತ ॥
ವನಭೋಜನದ ಬಳಿಗೈತರಲರ್ಭಕ । ರನುಪಮನೊಡನೆಂದರಾಗ ॥೮೧

ಕರದ ತುತ್ತನು ಸವಿವಿನಿತರೊಳೀಕ್ಷಣ । ಕರುವನರಸಿ ತಂದೆ ಕೃಷ್ಣ ॥
ತೆರಳೆ ಕೈಯೊಳಗದೆ ಬಾಯೆಮ್ಮ ತಂದೆ ಕು । ಳ್ಳಿರು ಯೆಂದು ಕರೆದರಚ್ಯುತನಾ ॥
ಎನುತಲೆಲ್ಲರು ಸಹ ಭೋಜನಂಗೈಯಲು । ಇನನಸ್ತಾಚಲವ ಸೇರಿದನು ॥
ಬನದೊಳರ್ಭಕರೊಡನಾಡುತ ಮೆಲ್ಲನಂ । ದನುಪಮ ಬಂದ ಗೋಕುಲಕೆ ॥೮೩

ಅಘನ ಸಂಹರಿಸಿದನಚ್ಯುತನಿಂದೆಂದಾ । ಬಗೆಯನರುಪಿದರರ್ಭಕರು ॥
ಮಗುವೆ ಪರುಷವಾದುದು ವಾರ್ತೆಯೆಂದಾಗ । ಮೃಗನಯನೆಯರು ಶಂಕಿಸಲು ॥
ಹರೆದುದೀಯದ್ಭುತವಾರ್ತೆ ಗೋಕುಲದೊಳು । ಹರಿಯ ಕೇಳಿದ ಬಲರಾಮ ॥
ಮರೆಮಾಜಲೀತಕೆನ್ನೊಡನರಿವುವೆನ । ಲರವಿಂದನೇತ್ರನಿಂತೆಂದ ॥೮೪

ತುರುಗಾಹಿಗಳು ತುರುಗಳುಸಹಿತೆನ್ನಂಗ । ಸ್ಪರುಶಸುಖವನಪೇಕ್ಷಿಸಲು ॥
ಮರುಕದಿಂದೆಲ್ಲಿರಿಗರ್ಭಕನವೊಲೊಂದು । ವರುಷವಾಡಿದೆನೆಂದ ನಗುತ ॥೮೬

ಬಿದಿಯ ಬೇಗೆಯನು ಕೇಳುತ ರಾಮ ತನ್ನಯ । ಹೃದಯದೊಳಚ್ಚರಿಗೊಳಲು ॥
ಪದುಮನಾಭನ ಮೂರ್ತಿಸುಧೆಯ ಸೇವಿಸುತೆ ಸಂ । ಪದದೊಳಿರ್ದುದು ಗೋಪ
[ನಿವಹ ॥೮೭

ಇರಲಿರಲಚ್ಯುತಾನನದ ಸೌಂದರ್ಯವ । ತುರುಗಾತಿಯರು ನಿರೀಕ್ಷಿಸುತ ॥
ಸ್ಮರಪರವಶೆಯರಾಗುತ ತಮ್ಮ ಹೃದಯದೊ । ಳರವಿಂದಾಕ್ಷನವೊಪ್ಪುತಿಹರು ॥
ಕರುಗಾಹಿತನವನುಳಿದು ಗೋಪರೊಡಗೂಡಿ । ತುರುವ ಕಾಯಲು ಕೃಷ್ಣನೈದೆ॥

ತರಳಾಕ್ಷಿಯರ ಮನ ಹರಿಯೊಡನೈದಲು । ಬಂಡಿಂಬಮಾತ್ರದೊಳಿಹರು ॥೪೯
ಕಾಂತಾರದೊಳು ಲಕ್ಷ್ಮೀಕಾಂತನಾಡುತ ತನ್ನೀ । ಕಾಂತಭಕ್ತರನೊಡಗೂಡಿ ॥
ಮಾಂತರುವಿನ ನೆಳಲೊಳು ಕೊಳಲೂದುತ । ತಾಂ ತುರುಗಳನು ಕರೆವನು ॥೯೦
ಗಂಗೆ ಬಾರವ್ವ ಗೋದಾವರಿ ಕಾವೇರಿ । ತುಂಗೆ ಯಮುನೆ ಬಾಯೆನಲು ॥
ರಂಗ ಕರೆದನೆಂದು ನದಿವನಿತೆಯರು ಬಂ । ದಂಘ್ರಿಯುಗಕೆ ನಮಿಸುವರು ॥೯೧
ಇರಲು ಗೋವಳರು ತುರುಗಳ ನೀರ್ಗುಡಿಸಲು । ತರುಬಿತು ಯಮುನೆಯ ತಡಿಗೆ ॥
ಉರಗಾಲಯದ ಮಡುವೆಂಬುದನರಿಯದೆ । ಸೊರಗಿದರನಿಬರಾಕ್ಷಣದಿ ॥೯೦
ಕರುಣಾಕಟಾಕ್ಷದಿಂದೀಕ್ಷಿಸಿ ಗೋಪರ । ತುರುವಿಂಡುಸಹಿತೆಬ್ಬಿಸಿದನು ॥
ಇರಬಾರದುರಗ ನಿಲ್ಲೆನುತ ತೀರದೊಳಿರ್ದ । ತರುವನೇರಿದ ಹರಿ ಭರದ ॥೯೩
ಮುಂಗೈಯ ಕೆಂಕೆಣವನು ನೇವರಿಸುತ ಬೆ । ಡಂಗಿನಿಂ ಬಿಗಿದುಟ್ಟಂಬರವ ॥
ರಂಗನಾಕ್ಷಣ ದುಮ್ಮಿಕ್ಕಿದನು ಮಡುವಿಗೆ ಕಾ । ಳಿಂಗ ಬೆದರಿ ಬೆರಗಾಗೆ ॥೯೪
ಆರು ತನ್ನಾಲಯಕೆಳಿದರೆನುತ ಫಣಿ । ಕಾರಿದ ವಿಷವ ಹೂಂಕರಿಸಿ ॥
ನೀರು ಕಾಹೇರಿ ಕುದಿಯೆ ವಿಷಜ್ವಾಲೆ ತಾ । ಸೇರಿತಭ್ರವನೇನನೆಂಬೆ ॥೯೫
ದುರುಳಕಾಳಿಂಗ ಭೋಗರ್ಗರೆಯುತ ಬಂದಾಗ । ಹರಿಯು ಕಂಡನು ಕೋಪದಿಂದ ॥
ತರುಬತಲಿದ್ದನಚ್ಯುತನ ಮಡುವಿನೊಳು । ನರನೆಂದೆ ಭ್ರಮಿಸಿ ಗರ್ವದಲಿ ॥೯೬
ನರರು ವರ್ಣದೊಳು ಪಿರಿಯರಾಗಿ ನಿಗಮಾಂತ । ಪರಿಯಂತ ಕಲಿತು ವಿದ್ಯೆಗಳಾ॥
ಹರಿಯ ನಿರಿಗೆಯನರಿಯದೆ ಬಳಲುವಲ್ಲಿ । ಗರಳಾತ್ಮನರಿವನೆಂತಕಟ! ॥೯೭
ಪರಿದು ಪಿಡಿವನೊಮ್ಮೆ ಹರಿ ಮಾಯವಾಗಲು । ಮರುಗುತೆಣ್ದೆಸೆಯನೀಕ್ಷಿಸನು ॥
ಅರಿವುಮೋರದ ಬಾಜಡಕರ್ಮರಂತಹಿ । ಯರಸುವನಂತರಾತ್ಮಕನಾ ॥೯೮
ಆವ ಪರಿಯೊಳಾದೊಡೆಯು ಚಳಿಯದೆ ಮತ್ತೆ । ಶ್ರೀವರನೊಳು ತೊಳಲಿದರೆ ॥
ದೇವದೇವನ ಕಾಣಲಹುದೆಂಬವೊಲು ಫಣಿ । ಪಾವನಮೂರ್ತಿಯ ಪಿಡಿದಾ ॥೯೯
ಸಿಕ್ಕಿದ ಬಳಿಕ ಬಿಡದೆ ಬಾಲಕರು ತಮ್ಮ । ಹೃತ್ಕಮಲದೊಳಿಡುವಂತೆ ॥
ರಕ್ಕಸಾಂತಕನ ಬಿಡದೆ ಬಂಧಿಸುತ ಫಣಿ । ತೆಕ್ಕೆ ಮಧ್ಯದೊಳಿಟ್ಟನಾಗ ॥೧೦೦

ಕೆಂಡರು ಗೋವಳರೀಫಣಿರಾಜನು । ದ್ದಂಡಕೈತ್ಯವ ಹರಿಯಿರವಾ ॥
ದಿಂಡುಗೆಡೆದು ಧರೆಯೊಳು ಶೋಕಿಸುತ ದೂರ । ಕೊಂಡುಯ್ದ್ರಾನಂದನೆಡೆಗೆ ॥

ಕೇಶಿದಾಕ್ಷಣ ಗೋಕುಲದ ಜನರೆಲ್ಲ ವೈ । ಹಾಳಿಯಿಂ ಬಂದು ನೋಡಿದರು ॥
ಗೋಳಿಟ್ಟರಾಗ ಯಶೋದೆನಂದಾದಿಗ । ಳೇವೆಳ್ವೆನದ್ಭುತವಾಯ್ತು ॥೧೦೨

ತುರುವಿಂಡುಗಳು ಬಂದು ಹರಿಯ ಬಳಸಿ ನಿಂದು । ಕರೆದವಕ್ಷಿಯೊಳು ಕಂಬನಿಯಾ ॥
ತರಳಾಕ್ಷಿಯರು ಕೃಷ್ಣ ಹಾಯೆನುತವನಿಯೊ । ಳೊರಗಿದರಾಗ ಮೂರ್ಛೆಯಲಿ ॥

ಕಂಡನು ದಾನವಾಂತಕ ತನ್ನ ಭಕ್ತರು । ದ್ದಂಡಶೋಕವ ನೋಡಿ ನಗುತ ॥
ಕುಂಡಲಿಯನು ತಡಿಗೆಳೆತಂದು ಫಣದೊಳು । ತಾಂಡವಗೈದನರ್ತಿಯಲಿ ॥೧೦೪

ಅಂಡಕೋಟಿಗಳ ಧರಿಸಿದ ಕೃಷ್ಣನ ಪಾದ । ಪುಂಡರೀಕದ ಹತಿಗುರಗ ॥
ಬೆಂಡಾಗುತಸು ಕಂಠಗತವಾಗಲಾಣ್ಮನ । ಕೆಂಡರಾನಾಗಾಂಗನೆಯರು ॥೧೦೫

ಕರ್ಣಪತ್ರಗಳ ತಟ್ಟಿಯೊಳಿಟ್ಟು ಕೃಷ್ಣನ । ಸನ್ನಿಧಿಗೈತಂದರಾಗ ॥
ಕನ್ನಿಯರಿಗೆ ಪತಿಭಿಕ್ಷನೀವುವೆಂ । ದುನ್ನತನಡಿಗೆರಗಿದರು ॥೧೦೬

ಶ್ರುತಿತತಿಗಳು ಕಾಣಲರಿದು ಬ್ರಹ್ಮಾದಿಗಳ್ । ಯತನಗೈಯಲು ಲಭ್ಯವಹುದೆ ॥
ಅತುಲಿತಪದವ ಶಿರದೊಳಾಂತು ನಿಂದೆಮ್ಮ । ಪತಿಯ ಭಾಗ್ಯಕೆ ಸರಿಯುಂಟೆ ॥೧೦೭

ನಾಗಾಂಗನೆಯರ ಭಕ್ತಿಗೆ ಮೆಚ್ಚಿ ಮಾಧವ । ನಾಗಾಧಿಪನ ಬಿಟ್ಟನಾಗ ॥
ಬೇಗದೊಳೆದ್ದು ವಂದಿಸುತ ಕಾಳಿಂಗ ಮ । ತ್ತಾಗಮವೇದ್ಯಗಿಂತೆಂದ ॥೧೦೮

ಪರಮಾತ್ಮನೆಂಬುದನರಿಯದಜ್ಞಾತೆಯಿಂದ । ನರನೆಂದೆ ಮರುಳಾದೆನಕಟ ! ॥
ಮರೆವುದೆನ್ನಪರಾಧಶತವನೆನುತ ಮಗು । ಳೆರಗಿದನಚ್ಯುತಾಂಘ್ರಿಯೊಳು ॥೧೦೯

ಪದದೊಳೆರಗಿದ ಕಾಳಿಯನ ಮೈಯ್ದಡವುತ । ಯದುಕುಲದರಸನಿಂತೆಂದ ॥
ಇದು ವಶವಲ್ಲ ನಿನಗೆ ನಿನ್ನ ಪೂರ್ವದ । ಸದನಕೈದುವದು ನೀನೆಂದ ॥೧೧೦

ಎನಲು ಫಣೀಂದ್ರನಿಂತೆಂದ ತನಗೆ ಬಂದ । ವಿನತಾನಂದನನ ಮೈರವನು ॥
ಅನುಪಮಾಂಘ್ರಿಗಳು ಶಿರದೊಳಿರೆ ಗರುಡ ನಿ । ನ್ನನು ಮುಟ್ಟನಂಜದರೆಂದ ॥೧೧೧

ಎನುತಲಹಿಯನು ಕಳುಹಿ ಕೃಷ್ಣಲೀಲೆಯ । ನನಿತನು ಕೆಂಡು ಗೋವಳರು ॥

ತನತನಗಾನಂದಾಬ್ಧಿಯೊಳೋಲಾಡುತ ಗೋಪ । ಜನವಾವರಿಸಿತು ಶ್ರೀಹರಿಯಾ।
ನಂದ ಯಶೋದೆ ಗೋಪರ ವೃಂದ ಸಹಿತಲಾ । ನಂದಗೋಕುಲಕ್ಕೈದುತಿರಲು ॥
ಹಿಂದೆ ಮುಂದೆಲ್ಲಿಯು ಮಾರ್ಗಕಾಣದ ವೋಲು । ಬಂದು ಬಳಸಿತು ದಾವಾಗ್ನಿ ॥

ಅಂಜುತ ಗೋಪಗೋಪಿಯರೆಲ್ಲ ಹರಿಪಾದ । ಕಂಜವ ಮರೆವುಗಲಾಗ ॥
ಕುಂಜರವರದನವರಿಗಭಯವನಿತ್ತು । ಭಂಜಿಸಿದನು ದಾವಾನಳನ ॥೧೧೪

ಶ್ರೀವರನೊಲುಮೆಯುಳ್ಳರಿಗೆ ಜಗದಿ ಭಯ । ವಾವುದೆಂದಮರರಭ್ರದೊಳು ॥
ಪೂವಿನ ಮಳೆಗರೆಯಲು ಕೃಷ್ಣನೈತಂದ । ಗೋವಳರೊಡನೆ ಗೋಕುಲಕೆ ॥೧೧೫

ಅಂಗನಾಮಣಿಗಳನಂಗನಾಕಾರದ । ರಂಗನ ಮೂರ್ತಿಸುಧೆಯನು ॥
ಕಂಗಳಿಂ ಕುಡಿದು ದಣಿಯದೆ ಮನಂಗಳಿಂ । ಮಂಗಳಾಂಗನನಪ್ಪುತಿಹರು ॥೧೧೬

ಹರಿಭಕ್ತರಿಗೆ ಭಕ್ತಿಧುರವಿಜಯರರಕ್ತಿ । ವಿರಹಿಗಳಮೃತದ ಬುತ್ತಿ ॥
ದುರಿತಶರಧಿಯ ಹೀರುವ ಬಾಡಬೆಯ ನೆತ್ತಿ। ನೆರೆ ಕೋವಿದರು ಕೇಳ್ವುದರ್ತಿ॥೧೧೭

ಇಂತೀ ವೇಣುಲೀಲಾಶತಕಂ ಸಂಪೂರ್ಣಂ.

— ಶೃಂಗಾರ ಸಪ್ತತಿ —

ಚೆಲುವ ಚೆನ್ನಿಗನೊಲುಮೆಯನು ಬಯಸಿ ಗೋಪ । ಲಲನೆಯರೇಕಚಿತ್ತದೊಳು ॥
ಜಲಜಮಿತ್ರನ ಕುವರಿಯ ಸನ್ನಿಧಿಯನೈದಿ । ಮಳಲಗೌರಿಯ ನೋಂತರಾಗ ॥೧

ಎಲ್ಲಾದೇವರೊಳು ತಾನಿಲ್ಲದಿಲ್ಲೆಂಬುದ । ನೆಲ್ಲರಿಗರುವುವಂದದಲಿ ॥
ಫುಲ್ಲನೇತ್ರೆಯರು ಪಾರ್ವತಿಯ ಪೂಜಿಸೆ ಕೃಷ್ಣ । ಮೆಲ್ಲನಲ್ಲಿಗೆ ನಡೆತಂದ ॥೨

ಆಸಮಯದೊಳು ಮತ್ತಾಶೆಮುಖಿಯರು । ನೇಸರಿನುಪಟಳದಿಂದ ॥
ಆಸರಸಿಯೊಳಾಡುತುಡವ ದುಗುಲಗಳ । ನಾಸೈಕತದ ಮೇಲಿಟ್ಟರಲು ॥೩

ಅಂಬರಮುಗ್ಧೆಯರಂಬರಗಳನು ವಿ । ಶ್ವಂಭರನುಯ್ದು ತೀರದೊಳು ॥
ಅಂಬರಡಂಬರವನು ಪಿಡಂಬಿಪ ಮರ । ಗೊಂಬನೇರಿದನಂಬುಜಾಕ್ಷ ॥೪

ನಾಗಶಯನನನಾಗಮವ ಕಂಡು ಕಾಂತೆಯ । ರಾಗನುರಾಗದಿಂದೈದಿ ॥
ನಾಗವಾರಣಕರಿಣಿಗಳೆಂಬ ತೆರದಿ ಪು । ನ್ನಾಗತರುವ ಸೇರಿದರು ॥೫

ಅಂಬರವ್ಯತವೃಕ್ಷಮಧ್ಯದೊಳಗೆ ಮೇಘ । ಡಂಬರದಂತೆ ರಾಜಿಸುತ ॥
ಜಂಭಾರಿಚಾಪವೆಂಬಂತೆ ಪುರ್ಬುಗಳು ಪೀ । ತಾಂಬರವೆಂಬ ಮಿಂಚೆಸೆಯೆ ॥೬

ಅಂಬುಜಾನನಕಡರುವ ತುಂಬಿ ನಾಸಿಕ । ವೆಂಬ ಚಂಪಕವ ಕಂಡುಂಜಿ ॥
ಬೆಂಬಳಿವಿಡಿದು ಸುತ್ತುವವೊಲು ಕರುಳ್ಗಳಾ । ಡಂಬರವಿರ್ದುದಚ್ಯುತನ ॥೭

ಕಾತುರದಿಂ ತುರುಗಾತಿಯುರ್ಮೀಲ್ಮೊಗಿಡಿ । ಚಾತಕಿಯಂತೆ ಬಾಯ್ವಿಡುತ ॥
ಪ್ರೀತಿಯಿಂ ಕಾರುಣ್ಯರಸವನೆರೆಯ ಜೀ । ಮೂತಾಂಗನೆಮಗೊಲಿದೆನುತ ॥೮

ಅಂದು ಶ್ರೀಪಾದ ಸೋಂಕಲು ಕಲ್ಲು ಸತಿಯಾಗ । ಲಿಂದು ಕೃಷ್ಣಾಂಘ್ರಿಸ್ಪರ್ಶ [ದೊಳು ॥
ಇಂದುವದನೆಯಾಗದಿರದು ಪಾದಪವೆಂದು । ಕುಂದಿದರಂದಬಲೆಯರು ॥೯

ಮಾರನ ಶೂರತ್ವವನು ಮುದ್ರಿಸುವೆನೆಂದು । ಸಾರಿ ಬಂದುದು ಲಜ್ಜೆ ಭರದಿ ॥
ನಾರಿಯರಂಗದೇಶವ ಕುಡಿಗಣ್ಣಿಗೆ । ತೋರದಂತಾವರಿಸಿದುದು ॥೧೦

... ...

ಈತೆರನಾಗೆ ತನ್ನಯ ಶಕ್ತಿ ಲಜ್ಜೆಯಿಂ । ಬೀತುದೆಂಬುದ ಕಾಮನರಿದು ॥
ಬೇತನಾತ್ಮಕನೆ ರಕ್ಷಿಪುದೆನುತಲಿ ತಮ್ಮ । ತಾತನೊಡನೆ ಮೊರೆಯಿಡಲು ॥೧೦
ಮಗನ ವಾಕ್ಯವ ಕೇಳಿ ನಗಧರ ನಗುತಲಾ । ಮೃಗನಯನೆಯರನೀಕ್ಷಿಸುತ ॥
ಬಿಗುಮಾನವೇಕೆ ತೋಳ್ಗಳನೆತ್ತಿ ಕರಗಳ । ಮುಗಿಪುದೆಂದೆನುತ ನೇಮಿಸಿದ ॥೧೩
ಮುರರಿಪುವೀಕ್ಷಿಸಲಾಕ್ಷಣ ಲಜ್ಜೆ ತಾ । ಸರಿದುದೆಂಬುದ ಕಾಮ ಕಂಡು ॥
ಹರಿನೇತ್ರವೆಂಬ ಶರಗಳಿಂದ ಕುಚಮಧ್ಯ । ದುರವ ಕೀಲಿಸುತ ಬೊಬ್ಬಿರಿದ ॥೧೪
ತರಹರಿಸಲು ತೆರಹರಿಯದೆ ಕಾಂತೆಯರ್ । ಮರೆವೊಗುತಚ್ಯುತಾಂಘ್ರಿಗಳಾ ॥
ಕರಗಳ ಮುಗಿದು ಕೃಷ್ಣಾರ್ಣವ ರಕ್ಷಿಸೆಂ । ದೆರಗಿದರಾನಂದಸುತಗೆ ॥೧೫
ಸಚ್ಚರಿತೆಯರ ಭಕ್ತಿಯ ಕಂಡು ಮಾಧವ । ಮೆಚ್ಚಿದೆ ಕೇಳಿ ನೀವೆನಲು ॥
ಬಿಚ್ಚಿ ಬಿನ್ನವಿಸಲೇತಕೆ ಬೆತ್ತವರಿಯದೆ । ಪಚ್ಚೆಗಿಕ್ಕದಿರೆಂದರವರು ॥೧೬
ಅಂಗನೆಯರಿರ ನಿಮ್ಮಿಂಗಿತವನು ಬಲ್ಲೆ । ಹಂಗಗನಾದೆ ನಾ ನಿಮಗೆ ॥
ಸಂಗಸುಖವನೀವೆನಂಜದೇಡೆನುತ ನೀ । ಲಾಂಗ ಸಂತೈಸಿದನವರ ॥೧೭
ಎನಲು ಸಂತಸದೊಳು ವನಿತೆಯರು ತಂತಮ್ಮ । ಕನಕವಸನಗಳನುಟ್ಟು ॥
ಮನದಲ್ಲಿ ವನರುಹಾಂಬಕನ ಮೂರ್ತಿಯನಿಟ್ಟು । ಮನೆಗೆ ಬಂದರು ಮಾನಿನಿ
[ಯರು ॥೧೮

ಒಂದು ದಿವಸ ನಂದಾದಿಗಳು ಗೋಕುಲದೊಳು । ಸಂದಣಿಗೊಳುತಿರೆ ಕಂಡು ॥
ಎಂದಿಗಿಂದಧಿಕಸಂಭ್ರಮವಿದೇನೆನುತ ಗೋ । ವಿಂದ ನಂದನ ಬೆಸಗೊಳಲು ॥೧೯
ಎಂದೊಡೆಂದನು ನಂದ ನಂದನನೊಡನೆ ಮು । ಕುಂದ ಕೇಳಿಂದು ಗೋಕುಲದಿ ॥
ಇಂದ್ರಯಾಗವನು ಮಾಡುವೆವೆನೆ ನಸುನಗು । ತೆಂದನಾನಂದಗುತ್ತರವಾ ॥೨೦
ಆವುದಿದಕೆ ವಿಧಿ ದೇವತೆ ಯಾರು ಮ । ತ್ತಾವುದು ಫಲವಿದರಿಂದ ॥
ಆವುದೀಕರ್ಮ ಲೌಕಿಕವೊ ವೈದಿಕವೊ ನೀ । ವೀವೆಗೆಯನು ಪೇಳ್ವೆನೆನಲು ॥೨೧
ಎನಲೆಂದ ನಂದನೀಕರ್ಮಾಧಿದೇವತೆ । ಯ ನಿಮಿಷಾಧಿಪನಿದರಿಂದ ॥

ಘನವೃಷ್ಟಿಯಿಂ ತುರುಗಳು ತುರುಗಳು ಮೇಯ । ಲನುಪಮಫಲವಹುದೆಂದ ॥
ಕೃಷ್ಣನಾರಿದಕೆ ಜಗವು ದೈವತಂತ್ರದಿಂ । ತತ್ಕಾಲಖುತುಧರ್ಮದಿಂದ ॥
ಪಕ್ಷವರಿತು ವೃಷ್ಟಿಯಹುದು ಬೆಳೆವುದು ತ್ರಿ । ವಿಕ್ರಮನಾಜ್ಞೆಯೊಳೆಂದ ॥೨೩
ಬರಿದೆ ಸಾಧನವನುರಿಯೊಳು ಸುರಿಯದೆ ಭೂ । ಸುರರುಂಡು ತೃಪ್ತಿವಡೆಯಲು ॥
ಹರಿ ತುಷ್ಟನಹನು ತುರುವಿಗೆ ನಿವಾಸಾದೀ । ಗಿರಿಯ ಪೂಜೆಯು ಮಾಳ್ಪುದೆಂದ ॥
ಜಲಜಾಕ್ಷ ನುಡಿದ ವಾಕ್ಯವ ಕೇಳಿ ಗೋಪರು । ಪಲವು ತೆರದ ಸಾಧನಗಳ ॥
ನಲವಿನಿಂದನುಗೊಳಿಸುತಲಿ ಗೋವರ್ಧನಾ । ಚಲದ ತಪ್ಪಲನು ಸಾರಿದರು ॥೨೪
ಪಾಕಶಾಲೆಗಳ ನಿರ್ಮಿಸಿ ವಿಪ್ರೋತ್ತಮರಿಗೆ । ಶಾಕಾದಿಸೂಪಸಾಧನವ ॥
ಬೇಕೆಂಬುದುಮನಿತ್ತಪರ ಸತ್ಕರಿಸುತ । ಸೇಕಹಿರಣ್ಯದಾನದೊಳು ॥೨೬
ಗಿರಿರಾಜನಿಗೆ ಪೂಜೆಗೈದು ಕ್ಷೀರಾನ್ನದ । ತೆರಳೆಯುರಿಸಿ ಕರದೊಳು ॥
ಇರಿಸಿ ಗೋವಳರು ಸಹಿತ ಕೃಷ್ಣನದ್ರಿಗಂ । ದೆರಗಿದ ನರಲೀಲೆಯಿಂದ ॥೨೭
ಅತ್ತಲಾಶೈಲಾಗ್ರದೊಳು ತುತ್ತುಗೊಳುತ ಮ । ತ್ತಿತ್ತ ಗೋಪರ ಸಮೂಹ [ದೊಳು ॥
ಪ್ರಾರ್ಥಿಸುತದ್ರಿಶಿಖರದ ಮೂರ್ತಿಯ ನೋಡಿ । ಸ್ತೋತ್ರಗೈವನು ತನ್ನ ತಾನೆ ॥
ಕರ್ತೃಭೋಕ್ತೃತ್ವವೆರಡು ತಾನೆಯೆಂಬುದ । ಪ್ರತ್ಯಕ್ಷವಾಗ ತೋರಿಸುತ ॥
ಗೋತ್ರರಾಜನವೋಲವರೊಳು ಮಾತಾಡುವ । ತಾ ತುರುಗಾಹಿಗಳೊಡನೆ ॥೨೯
ಹರಿಗವರಾಧಗೈವನ ಸೀಮೆಯೊಳಗೆ ತಾ । ನಿರಬಾರದೆನುತಿಂದ್ರದಿಶೆಯ ॥
ಪರಿಹರಿಸುತಲಿ ಮೆಲ್ಲನೆ ಬಂದು ಪಶ್ಚಿಮ । ಗಿರಿಯ ತಪ್ಪಲ ಸಾರ್ದ ದ್ಯುಮಣಿ ॥
ಹರಿಯಾಂಗುಧವ ಪೆಸರ್ವಕ್ಕಯುರದಿ ಸಂಧ್ಯಾ । ಕಿರಣ ವ್ಯಾಪಿಸೆ ಜೋಡನಗಲಿ ॥
ವಿರಹವೆಂಕೆಗೆ ವಕ್ಷ ಬಿರಿದರುಣಾಂಬುವು । ಸುರಿದುದೆಂಬಂತೆ ಸೂಚಿಸಿತು ॥೩೧
ಸರ್ವಲೋಕೇಶ್ವರನದ್ರಿರಾಜನಿಗಿಂದು । ಹಬ್ಬವ ಮಾಡಲಾಗಸದಿ ॥
ಉಬ್ಬುಚಪ್ಪರಕೆ ಕಟ್ಟಿದ ವಿತಾನಗಳಿಂತೆ । ಪರ್ಬಿತರುಣಮಯಕಿರಣ ॥೩೨
ವಿಮಲಾತ್ಮಕನು ಗೋಪರೊಳು ಬೆರೆದುದ ಕಂಡು । ಕಮಲೆ ಕೋಪಿಸಿ ಹರಿಯೊಡನೆ ॥

ಕಮಲಾಲಯದ ಬಾಗಿಲನು ಮುದ್ರಿಸಿದವೋಲು । ಕಮಲದಳಗಳು ಮುದ್ರಿಸಿತು ॥
ಮಧುಲೋಭದಿಂದ ಭ್ರಮರಗಳು ಮೊರೆಯುತ । ಪದುಮವ ಬಳಸಿ ಕಾದಿರಲು ॥
ಪದುಮಾಲಯದ ಸುತ್ತುಗಾಹಿನ ಭಟರೆಚ್ಚ । ರದೊಳಿಹರುತೆ ರಂಜಿಸಿತು ॥೩೮
ಹರಿಮೂರ್ತಿಯನು ಕಾಂಬ ವಿರಹದಿಂ ಪ್ರಾಚೀದಿ । ಕ್ತರುಣಿ ಬಿಳ್ಪಾದಳೆಂಬಂತೆ ॥
ಸುರಪನ ದೆಸೆ ಬೆಳಕಾದುದು ಕಾವಳ । ಪರಿದುದಿಂದುವಿನುದಯದೊಳು ॥೩೯
ಮಾರನಲಗ ಸಾಣಿಪಿಡಿವ ಚಕ್ರವೊ ಪ್ರಾಚೀ । ನಾರಿಯ ಕರ್ಣಕುಂಡಲವೋ ॥
ಕ್ಷೀರಾಬ್ಧಿಕುವರಿಯಾಣ್ಮನ ಶ್ವೇತಚ್ಛತ್ರದಂ । ತೇರಿದ ಶಶಿ ಪೂರ್ವಗಿರಿಯಾ ॥೩೪
ಗೊಲ್ಲವೆಂಗಳ ವಿರಹಾನಲಜ್ವಾಲೆ ತಾ । ಬೆಲ್ಲಿತೆಣ್ದೆಸೆಗೆಂಬ ತೆರದಿ ॥
ಪಲ್ಲವಾಸ್ತ್ರನ ಕೀರ್ತಿಯುವೊಲಿಂದುಕಿರಣ ತಾ । ನೆಲ್ಲಿಯು ತುಂಬಿತಾಕ್ಷಣದಿ ॥
ಕುಮುದಾಸ್ತ್ರಗಳನು ಕೈಕೊಂಡು ಮದನ ಗೊಲ್ಲ । ಪ್ರಮದೆಯರನು ಕೊರಿತಿಡಲು ॥
ಕಮಲಾಕ್ಷಿಯರ ಮಾನಸಕೆ ಕುಮುದವಾಗೆ । ಕುಮುದವೆಂಬರು ನೈದಿಲೆಗಳ ॥೩೮
ಆಸಮಯದೊಳು ಕಾಂತೆಯರು ಕಾತರದಿಂದ । ವಾಸುದೇವನ ಮೂರ್ತಿಸುಧೆಯ ॥
ಆಸ್ವಾದಿಸುತ ಕಂಗಳೊಳು ಕಾಮನೈಸರ । ಬೀಸಗೆಯನು ನೀಗುತಿಹರು ॥೩೯
ಇಂತು ಶ್ರೀಕೃಷ್ಣ ಕಾಂತಾಪರಿವೃತನಾಗಿ । ಸಂತಸದಿಂದ ಗೋಕುಲಕೆ ॥
ಅಂತರಾತ್ಮಕ ಬಂದು ನಿಳೆಯಕೈವಿದ ಭಕ್ತ । ರಂತರಂಗವ ಪುಗುವಂತೆ ॥೪೦
ಹರಿಮೂರ್ತಿಯನು ಬಿಟ್ಟು ಮರಳಲಾರದೆ ಗೋಪ । ತರುಣಿಯರಾಯಾಮಿನಿ
[ಯನು ॥
ಗರಳಾರ್ಣವವ ನೀಗುವಂತೆ ಕಳಿದರಾಗ । ತರಣಿ ಸುಳಿದ ಪೂರ್ವಗಿರಿಗೆ ॥೪೧
ಅನಿತರೊಳಾಪಾಕಶಾಸನ ಕೋಪದಿಂ । ದಿನಿತಾಸ್ತ್ರಿ ಗೋಪರಿಗೆನುತ ॥
ವಿನಿಧಿಯೊಳದ್ದುವೆನೀಗ ಗೋಕುಲವನೆಂ । ದೆನುತ ಗೋತ್ರಾರಿ ಗರ್ಜಿಸುತ ॥೪೨
ಕರೆಯೆ ಪುಷ್ಕಳಸಂವರ್ತನ ಕರೆ ನಿಗಳವ । ತರಿಯರಿ ಪ್ರಳಯಮೇಘಗಳ ॥
ಕರೆಯಲ್ಲಿ ಮಳೆಯ ಗೋಕುಲವ ನಿಮಿಷದೊಳು । ಕುರುಹ ಮರಸಲೆಂದ ಸುರಪ ॥
ಇರಲು ಮೇಘಗಳಭ್ರವನು ಮುಸುಕಲು ಸಿಡಿ । ಲೆರಗುತಾರ್ಭಟಿಸಿ ಗೋಕುಲಕೆ ॥

ಕರಿಯ ಸುಂಡಲಿನ ಪ್ರಮಾಣ ವೃಷ್ಟಿಯ ಧಾರೆ । ಕರೆದುದದ್ಭುತವನೇನೆಂಬೆ ॥೪೪
ತುರುಗಳೆಲ್ಲವು ಸಿಡಿಗೊಂಡುವು ಗೋಪರ । ನೆರವಿ ಕಂಗೆಟ್ಟು ಮರುಗುತ ॥
ದುರುಳ ಕೃಷ್ಣನ ಮಾತ ಕೇಳಿ ದೇವೇಂದ್ರನ । ಜರೆಯುವಿಂತಾಯ್ತು ಕಟಿನುತ ॥೪೫
ಪರಮಪುರುಷನಲ್ಲಿಗೈತಂದರನಿಬರು । ತೆರನಾವುದಿನ್ನೆಮಗೆನಲು ॥
ಕರಕಮಲಗಳ ನೆಗಹಿ ಕೃಷ್ಣ ನೀವಂಜ । ದಿರಿ ಗಿರಿಯಿದೆ ನಿಮಗೆಂದ ॥೪೬
ಹರಿ ನೆಗಹಿದನು ಗೋವರ್ಧನಾಚಲವನು । ತರುಮೃಗಸರಿಗಳೊಡನೆ ॥
ಕರದಿಂದ ಕೆಳಚಿ ಬೀಳದು ಗಿರಿ ನಂಬಿ ಬಂ । ದಿರಿ ಭಯವೇಕೆಂದ ನಗುತ ॥೪೭
ಎನಲು ಕೃಷ್ಣನ ಮೂರ್ತಿಯನು ಕಂಡು ಗೋಪರಂ । ದರಿ ಮಿಷಾಧಿಪನನೇಡಿಸುತ ॥
ಅನುಪಮಾನಂದದಿಂ ಬಂದರೆಲ್ಲರು ತಮ್ಮ । ಮನೆಗಳಿಗೈದುವಂದದಲಿ ॥೪೮
ಚಿತ್ತಜನಿತನನೀಕ್ಷಿಸುತಲಿಂದ್ರಿಯಗಳ । ವೃತ್ತಿಗಳನು ಮರೆದಾಗ ॥
ಪುತ್ತಳಿಯಂತೆ ಪೊಲೆರವರು ದಿವಾರಾತ್ರಿಗ । ಳೆತ್ತಲೆಂಬುದನು ತಿಳಿಯದೆ ॥೪೯
ತುರುಗಳೆಲ್ಲವು ಪರಿಚರಣವ ನೋಡುತ । ಕರುಗಳ ಕಂಬಲ ಮರೆದು ॥
ಪರಮಪುರುಷನೊಳಡಗಿ ಚಿತ್ತವ ತಮ್ಮ । ಮರೆದುವು ಮುನಿಗಳಂದದಲಿ ॥೫೦
ಇಂತೇಳು ದಿವಸವಾದುದು ಕೃಷ್ಣನ ಲೀಲೆ । ಯಂತರಿಕ್ಷದಿ ಕಂಡು ಸುರಪ ॥
ಕಂತುಪಿತನ ನರನೆಂದೆಣಿಸಿದೆನ್ನ । ಭ್ರಾಂತಿಗಿಷ್ಟೀವೇಳ್ವೆನೆಂದ ॥೫೧
ತಿರುಗಿ ಮೇಘ ಸ್ವಾಮಿಯೊಳ್ಹಿಗೆ ನಾ । ಗುರುವಾದೆನಕಟಕಟಿನುತ ॥
ಪರಮೇಷ್ಠಿಯಲ್ಲಿಗೈದಿದನಿಂದ್ರನಿತ್ತಲು । ಹರಿಗಡಿದುದು ಮಳೆಯಾಗ ॥೫೨
ಸರ್ವಜನರನು ಕೆಳುಹಿ ಕೃಷ್ಣ ಸುರಪನ । ಗರ್ವವನಿಳುಹುವಂದದಲಿ ॥
ಪರ್ವತವನು ಧರೆಗಿಳುಹಿ ಗೋಕುಲದೊಳು । ಸರ್ವಲೋಕೇಶ್ವರನಿರಲು ॥೫೩
ಅತ್ತಲಿಂದ್ರನು ಬೊಮ್ಮಗೆರಗಿ ತಾ ನಡೆದ । ವೃತ್ತಾಂತವನು ವಿವರಿಸಲು ॥
ಸತ್ಯಲೋಕಾಧಿಪ ಮರುಗಿಯೆ ಜರೆಯುತ । ಸುತ್ಪ್ರಮನ ಕುರಿತೆಂದ ॥೫೪
ಆರನಾವಂದು ಪ್ರಾರ್ಥಿಸಿದೆವು ಧರೆಗಾಗಿ । ಕ್ಷೀರಾರ್ಣವದ ತಡಿಗೈದಿ ॥
ಆರು ಬಂದವತರಿಸಿದರು ಮತ್ತೀಗಲ । ದಾರು ಶ್ರೀಕೃಷ್ಣ ಮಾನವನಿ ॥೫೫

ದುರುಳತನವನು ಮಾಡಿದೆ ಶಕ್ರ ನಿನ್ನನು । ಜರೆವೊಡೆ ಸಮಯವಲ್ಲೀಗ ॥
ಸುರಧೇನುಸಹಿತಲಾಕರುಣಾಳುವೆಡೆಗೈದಿ । ಮರೆವುಗು ಮನ್ನಿಪನೆಂದ ॥೫೬ ....
ಭರದಿ ಬಂದನು ಸುರನಾಥ ಶ್ರೀಕೃಷ್ಣನ । ಚರಣದ ಮೇಲಡಗಿಡೆದು ॥
ಕರುಣಾರ್ಣವನೆ ರಕ್ಷಿಸೆನ್ನ ಪರಾಧವ । ಮರೆವುದೆಂದೆ ಸರಿದನಾಗ ॥೫೭

ಅಂಗವಮರರು ನಿನಗೆಯಾಗ ನೀ ನಿನ್ನ । ಅಂಗವೆಸಗಿದ ತಪ್ಪುಗಳ ॥
ಕಂಗೊಳಿಸಿದರೆ ಕಾವವರದಾರಿನ್ನು ನೀ । ಲಾಂಗ ರಕ್ಷಿಪುದೆನ್ನನೆಂದ ॥೫೮

ಎನಲು ದೇವೇಂದ್ರನಂತ್ತಿ ತಕ್ಕೈಸಿ ತ । ದ್ವಿನಯೋಕ್ತಿಯಿಂದ ಮನ್ನಿಸುತ ॥
ಅನಘನು ಸುರಭಿಯ ಕರೆಯ ಬಿನ್ನೈಸಿದ । ಳನುಪಮನಡಿಗಭಿನಮಿಸಿ ॥೫೯

ಅಜ ಕಳುಹಿದ ದೇವರಭಿಷೇಕಕೋಸುಗೆ । ಭುಜಗಶಯನ ರಕ್ಷಿಸಿಲು ॥
ಗಜರಾಜವರದ ನಗುತ ತರಿಸಿದನು ಮೂ । ಜಗದಮಂಗಳತೀರ್ಥಗಳನು ॥೬೦

ಅಸುರಾರಿಯಭಿಷೇಕೋತ್ಸವವ ನೋಡಲು ಮಹಾ । ಋಷಿಗಳೆಲ್ಲರು ಬಂದರಾಗ ॥
ಕುಸುಮ ಚಂದನ ಕ್ಷೀರ ದಧಿ ಘೃತ ಮಧುಗಳಂ । ದೆಸೆಯಿ ಸುವರ್ಣಕುಂಭದೊಳು ॥

ಪುರುಷಸೂಕ್ತಾದಿಮಂತ್ರಗಳಿಂದ ಋಷಿಗಳಾ । ಪುರುಷೋತ್ತಮನ ಪೂಜೆಗೆಯ್ಯೆ ॥
ಸುರವನಿತೆಯರು ನರ್ತಿಸೆ ದೇವದುಂದುಭಿ । ಮೊರೆಯ ಕುಸುಮವೃಷ್ಟಿಕರೆಯ ॥

ಆದುದಚ್ಯುತಗಭಿಷೇಕಮಹೋತ್ಸವ । ವಾದುದೀಧರೆಗೆ ಮಂಗಳವು ॥
ಮಾಧವನಂಘ್ರಿಗೆ ನಮಿಸಿ ಸುರರು ಸಹಿ । ತೈದಿದನಮರೇಂದ್ರ ದಿವವ ॥೬೩

ಚೆಲ್ವರೆರೆಯನ ಮೂರ್ತಿಯ ಕಂಡಪ್ಸರೆಯರು । ತ್ಪುಲ್ಲಶರನ ಬಾಣಹತಿಗೆ ॥
ತಲ್ಲಣಗೊಳುತಲೆಂದರು ಸರಿಯಾವುದೀ । ವಲ್ಲವಿಯರ ಭಾಗ್ಯಕೆನುತ ॥೬೪

ಇರಲು ವಸಂತಸಮಯ ಬಂದುದಾಗಲೀ । ವಿರಹಿಮೇಧಕ್ರತುವಿಂಗೆ ॥
ತುರುಗಾತಿಯರ ಕಾಮಾಗ್ನಿಯನು ತಂದೆಲರಿಂದ । ಲುರುಬಿದನಾಗ ವಸಂತ ॥೬೫

ಕಾಮನಾಚಾರ್ಯನಾದನು ವಸಂತನು ತಾನೆ । ನೇಮದಿಂ ದೀಕ್ಷಿತನಾದ ॥
ಸೋಮರಜತಪಾತ್ರೆಯೊಳು ಸುಧೆಯಾಜ್ಯವ । ಹೋಮಕಾಹುತಿಯ ಮಾಡಿ
[ದರು ॥೬೬

ಶುಕ ಮಂತ್ರಗಳನು ವಾಚಿಸಿ ಸಾಮಗಾನದಿಂ । ಪಿಕನಿಕರಗಳು ಘೋಷಿಸಲು ॥
ಸ್ರುಕು ಸ್ರುವ ಮಾಂದಳಿರಾಗಿ ಭ್ರಮರತತಿ । ಬಕುತಿಯಿಂ ಮಾಳ್ಪುದೂಳಿಗವ ॥
ಮಂದಮಾರುತನಗ್ನಿಯನು ಹುತಗೊಳಿಸಿ ತಾ । ನಿಂದು ಋತ್ವಿಜನಾದನಾಗ ॥
ತಂದರು ವಿರಹಿಗಳೆಂಬ ಪಶುವ ಬೇಗ । ಬಂಧಿಸಿದರು ಲತೆಗಳಲಿ ॥೬೮
ದೀಕ್ಷೆಯ ಕೈಕೊಂಡು ಬಳಲಲದೇಕೆ ತಾ । ಸಾಕ್ಷಾದ್ವಿಷ್ಣುವಿಲ್ಲಿರಲು ॥
ಈಕ್ಷಣದೊಳು ಸ್ವರ್ಗಸುಖವನಿಲ್ಲೀವೆನೆಂ । ದೀಕ್ಷಿಸಿದನು ಕೃಷ್ಣ ಕೊಳಲ ॥೬೯
ಇಂದಿರೇಶನು ಕೊಳಲೂದಲಾಗಸದೊಳು । ಸಂದಣಿಸುತ ಸುರನಿಕರ ॥
ಅಂದೆಮಗವ್ಯ ತವಿತ್ತುದು ಪುಸಿ ಕೊಳಲಿನ । ರಂಧ್ರದೊಳಿದೆಯೆಂದರಾಗ ॥೭೦
ಈವ ಸ್ವರ್ಗದೊಳಾದೊಡೆಯು ದೊರಕುವುದೆ ಮ । ತ್ತೀವೇಣುರವಸುಧಾಪಾನ ॥
ಸ್ಥಾವರಜಂಗಮಸಹಿತ ಗೋಕುಲದೊಳು । ಪಾವನವಾದುದೇನೆಂದೆ ॥೭೧

ಇಂತೀಶ್ರೀ ಶೃಂಗಾರವ್ರಥಮಸರ್ವತ್ತಿ ಸಂಪೂರ್ಣಂ.

—ಶೃಂಗಾರ ದ್ವಿತೀಯಸಪ್ತತಿ—

ಬಂದು ದಿವಸಯಿಂದಿರೇಶ ರಾತ್ರಿಯೊಳು ಕಾ । ಳಿಂದಿಯೊತ್ತಿನ ಬನದೊಳಗೆ ॥
ಇಂದುವಿನುದಯದಿ ಕೊಳಲನೂದುತಲಿ ಗೋ । ವಿಂದ ಮೋಹಿಸಿದನೀಜಗವ ॥೧

ವೇಣುನಾದವನು ಕೇಳುತಲಿ ಮದನಬೋರ । ನೇಣಾಂಕನೆಂಬ ಕನ್ನದೊಳು ॥
ಮಾಣದೈತಂದು ಚಂದ್ರಿಕೆಯ ಬೆಳುವೆಯಿಟ್ಟು । ಕೇಣಿಗೊಂಡನು ಗೊಲ್ಲಪುರವ ॥೨

ಕಳವಳದಿಂ ತುರುಗಾತಿಯುರ್ಬಳಲಿ ತಾ । ವಲರಂಬನಸ್ತ್ರಹತಿಯೊಳು ॥
ಸಿಲುಕುವಿಂದ್ರಿಯಕರಣಗಳನಚ್ಯುತಪಾದ । ಜಲಜದೊಳ್ಬಚ್ಚಿಟ್ಟರಾಗ ॥೩

ಮನವು ಮಾಧವನ ಪಾದವ ಬಿಡಲಾರದು । ಮನವ ಬಿಟ್ಟಿರವಿಂದ್ರಿಯಗಳು ॥
ತನವು ಮನವ ಬಿಡಲರಿಯದದರಿಂ ಗೋಪ । ವನಿತೆಯರ್ಪೈದಿದರ್ಬನವ ॥೪

ಬಟ್ಟಮೊಗದೊಳಿಟ್ಟ ಬಟ್ಟಕತ್ತುರಿಯೊಡೆ । ಯಿಟ್ಟೆಣಿಸುವ ಪಯೋಧರದ ॥
ನಿಟ್ಟಸಲಸದಳವೆನಿಪ ಮಧ್ಯದ ಮಳ । ಲೊಟ್ಟಲಂದದ ಜಘನಗಳ ॥೫

ಕಟ್ಟುನಿರಿಯ ದುಗುಲದ ನಳಿತೋಳಿಂಗೆ । ತೊಟ್ಟ ಕಂಚುಕದ ಬಿಗುಹಿನಿಂ ॥
ಬಟ್ಟವಿಡಿದು ನಡೆತಂದರಾಮದನನ । ಪಟ್ಟದಾನೆಗಳೆಂಬ ತೆರದಿ ॥೬

ಹರನಿಂದ ಸ್ಮರನಳಿಯಲು ಮತ್ತವರ ಮಾವ । ನರಸಾಗಿ ವಿಟವಿರೋಧಿಗಳ ॥
ತರುಬುವ ಶಶಿಕರಶರಗಳಂತೈದಿದ । ರ್ತರುಣಿಯರ್ಬಳಿದಿಂಗಳಿನೊಳು ॥೭

ಇಂಗಡಲಮಳತರಂಗಗಳೆನಿಸೆ ಗೋ । ಪಾಂಗನಾಪಾಂಗಹೀಚೆಗಳು ॥
ಇಂಗದಿರನ ಬೆಳಗಿನೊಳು ಪೊಳೆದುದು ತಿ । ಮಿಂಗಿಲನಂತೆ ನೇತ್ರಗಳು ॥೮

ಆರಾಮದೊಳಗೈದುತಾರಾಮಾಮಣಿಗಳಂ । ದಾರಾಮಾನುಜನನರಸುತ ॥
ಆರಮಣೀಯಗುಣಂಗಳ ಪೊಗಳುತ । ಲಾರಮಾಪತಿಯ ಧ್ಯಾನಿಸುತ ॥೯

ಇಂದುವ ನೋಡಿ ನಿಂದಿಸಿದಳ್ಗೋಪಾಂಗನೆ । ಯಿಂದೀವರಾಪ್ತನೆ ನೀನು ॥
ಇಂದು ನಿನ್ನನು ನೋಡಲಣ್ಮದೆಮ್ಮಯ ನಯ । ನೇಂದೀವರಗಳು ಬಾಡುತಿವೆ ॥

ಮಂದಾನಿಲನ ಕುರಿತೆಂದಳಂಗನೆಯೊರ್ವ । ಳಿಂದೆಮ್ಮ ಸುಂದರಾಂಗವನು ॥
ಮಂದಿವಾಳದಲಿ ಸೋಂಕಲು ಜಡೆಯೆಲರುಣಿ । ತಿಂದುಕೊಳ್ಳದೆ ಮಾಣದೆನುತ ॥೧೧

ದಕ್ಷಿಣಾನಿಲ ನೀನಿಕ್ಷುವಿಲ್ಲನ ಕೊಡಿ । ಪಕ್ಷಪಾತದೊಳೆಮ್ಮ ಕೊಲುವೆ ॥
ಲಕ್ಷ್ಮೀಪತಿಯು ಕಾವ ತನಕ ಸೈರಿಸಿ ಮತ್ತೆ । ಶಿಕ್ಷೆಪ ಮನಕೆ ಬಂದಂತೆ ॥೧೨

ಮಾರಭೂಪಾಲ ವಸಂತಕನೊಡಗೂಡಿ । ಸ್ವಾರಿಯ ತೆರಳಿ ಬೀದಿಯೊಳು ॥
ಭೂರಿಬಲಂಗಳಾವರಿಸಿ ತಾವರೆಯೊಳು। ಸೂರೆಗೊಂಡರು ವಿರಹಿಗಳಾ ॥೧೩

ಮೋರು ಧನುವಮಾಡಿ ನಾರಾಯಣಾಸ್ತ್ರದಿಂ । ದೂರಗೆದ್ದನು ಹರ ಮೂರ ॥
ಮೂರು ಲೋಕವ ಜಯಿಸಿದ ಪೂವಿಲ್ಲಿನಿಂ । ಮಾರನೆ ಶೂರನೀಧರೆಗೆ ॥೧೪

ಪೆರೆದಲೆಯನ ಕಣ್ಣಿಂದುರಿದನೆಂಬುದ ಕೇಳಿ । ಹರುಷದಿಂದಿರ್ದೆವಿನ್ನೆ ವರ ॥
ಮರಳಿ ಬಂದೀಗ ನೀ ಕೊರಲನರಿವೆ ಕಾಮ । ತರವೆ ಹೊಗೊಲೆ ಸುಭಟರಿಗೆ ॥೧೫

ಅಂಗವಲ್ಲದು ವೀರರಂಗಕ್ಕೆ ಕೊರತೆ ನೀ । ನಂಗಹೀನನು ಜಗವರಿಯೆ ॥
ಅಂಗನಾಮಣಿಗಳುಸಿರು ತಾಕಿ ಹಿಂಗಲ । ನಂಗನೆಂದಭಿಧಾನವಾಯ್ತು ॥೧೬

ಮಲ್ಲಿಯೆಂಬವಳೊರ್ವವಲ್ಲವಿ ನುಡಿದಳಾ । ಮಲ್ಲಿಗೆಯಲರ ತಾ ಕೊಡು ॥
ಮಲ್ಲಿಗೆಂದೇ ಮನೆದಿರಿಸಿದ ಕಾಮನೀ । ಮಲ್ಲಿಗೆಯೆಂಬಂಬನೆನುತ ॥೧೭

ಮಾರನ ತೇರುವೆಸರನಿಟ್ಟ ಜಾಣರ । ದಾರೊ ಧರೆಯೊಳೀತರುವಿಗೆ ॥
ದೂರದಿಂ ನೋಡೆ ತೇರಂತೆ ಸೂಚಿಸುತಿದೆ । ಪೇರುಸಲುವುದು ಕಿಂಶುಕಗೆ ॥೧೮

ತಾಕಿದ ಬಾಣ ಕೊಲ್ಲದೆ ಹುಸಿಪೆಟ್ಟಾಗೆ । ಶೋಕಿಪಡುವರು ಗಾಯದೊಳು ॥
ಸೋಕಿದಾಕ್ಷಣ ಹರಣವ ಕೊಂಬ ಸರಳನ । ಶೋಕವೆಂಬರು ಲೋಕದೊಳಗೆ ॥

ಚಿತ್ತಜಬತ್ತಳಿಕೆಯೊಳು ಪೊರಡುವಂಬ । ಮೊತ್ತವೆಂಬಂತೆ ಪಾದರಿಯ ॥
ಮುತ್ತಿಯಾಗಸಕೆ ಬೆಗಿವ ಶಿಖೀಮುಖವ ಕಾ । ಣುತ್ತಲಂಜಿದರಬಲೆಯರು ॥೨೦

ಪಂಚಬಾಣನ ಕೈಯ ಮಿಂಚುವಸಿಯಪಿಡಿ । ಯಂಚುಗೊಂಡೆಯುಗಳೆಂಬಂತೆ ॥
ಚಂಚಲಾಕ್ಷಿಯರ ಕಣ್ಗೆಸೆದುದು ಬನದಿ ಪೂ । ಗೊಂಚಲು ಲತೆಯೊಳಲ್ಲಲ್ಲಿ ॥೨೧

ಸ್ಮರನ ಕೈಯಂಬಿನ ಮುಂಬಲಗೆಂಬಂತೆ । ಕುರುಮೊನೆಯೆಸಳ ಧಾರೆಗಳ ॥

ಕರವೀರಪತ್ರಗಳನು ಕೆಂಡು ಮರುಗಿದ । ತ್ರರುಣಿಯರಾಬನದೊಳಗೆ ॥೮೨

ಕಿರುನಗೆಯೆಂಬ ನೊರೆಯ ಬೆಳ್ಪು ಸೊಬಗನ । ತೆರೆಯೆಂಬ ನಳಿತೋಳ್ಗಳಾಗೆ ॥
ಸಿರಿಗಂಗಳೆ ಮತ್ಸ್ಯ ವರನಾಭಿ ಸುಳಿಯಾಗೆ । ಮೆರೆದಳಂಗನೆಯುವೊಲ್ ಯಮುನೆ॥

... ...

ಶಶಿಮುಖಿಯಂಗದೊಳೆಸವ ಸ್ವೇದಾಂಬು ತಾ । ಮುಸುಕಿತು ನವಿರನೆಂಬಂತೆ ॥
ಪೊಸನೀರು ನದಿಯೊಳು ನಸುಸೆರ್ಬೆ ದಡದ ಪು । ಲ್ವಸಲೆಯ ಮರಸಿತಲ್ಲಲ್ಲಿ ॥೮೪

ಆಗವಾರಣ್ಯದೊಳರಸಿ ಕಾಣದ ಕಡು । ಯೋಗಿಗಳಂತೆ ಕಾಂತೆಯರು ॥
ನಾಗವಕ್ಕೆಗನನರಸಿದರು ಬನದೊಳು । ನಾಗಗಮನೆಯರೊಗ್ಗಿನಲಿ ॥೮೬

ಕಾಂತಾರದೊಳು ಗೋಪಕಾಂತಾಮಣಿಗಳು ಶ್ರೀ । ಕಾಂತನನರಸಿ ಬಳಲುತ ॥
ಮಾಂದಳಿರಂತೆ ಬಾಡುತಲಿ ನಿತಾಂತಲ । ತಾಂತಮಂಟಪವನೈದಿದರು ॥೮೭

ಕೆಂಡರಾಗೋಪಮಾನಿನಿಯರು ಭುವನೋ । ದ್ದಂಡವೈವಗಳ ದೇವತೆಯಾ ॥
ಪುಂಡರೀಕಾಪ್ತನ ಮಗಳೆ ಮಗ್ಗುಲನೈದಿ । ಪುಂಡರೀಕಾಕ್ಷ ನಿಂದಿರಲು ॥೮೮

ಮೂಡುವ ಶಶಿಯ ಸುತ್ತಿದ ಮೋಡದಂತೆ ಜೋ । ಲಾಡೆ ಮೊಗದ ಕುರುಳುಗಳು ॥
ಸೂಡಿದ ಸೋಗೆಗರಿಗಳಿಂದ್ರಚಾಪವ । ನೇಡಿಸುವಂತೆ ರಾಜಿಸಿತು ॥೮೯

ನವಯೌವನೆಯರ ಮನುವೆಯ ಶ್ರೀಕೃಷ್ಣನ । ಕಿವಿಗೆ ಸೂಚಿಸಲೈದುವಂತೆ ॥
ವಿವರಿಸುವಾಯತೇಕ್ಷಣಗಳ ವರ್ಣಿಪ । ಕವಿಯಾವನೀಧರೆಯೊಳಗೆ ॥೩೦

ಮಲ್ಲಿಗೆಲತೆ ಕುಡಿವರಿದು ಸಂಪಗೆಯೆಸ । ಳಲ್ಲಿ ಮೊಗ್ಗಾದುವೆಂಬಂತೆ ॥
ಬೆಲ್ವನಾಸಾಗ್ರಮುಕ್ತಾಮಣಿತಿಲಕ ಭ್ರೂ । ವಲ್ಲಿ ರಂಜಿಸಿತು ಶ್ರೀಹರಿಯಾ ॥೩೧

ತಿಂಗಳೆಳೆಗುಮೀರುವ ಸುಸ್ಮಿತದ ದಾಡಿ । ಮಂಗಳೆಂದದ ದಂತರುಚಿಯಾ ॥
ಮಂಗಳಾಧರದ ಪೊಂಗೊಳಲ ಸೊಬಗು ಮೂಪ । ಗಂಗಳೆ ಮೋಹಿಸುತಿಹುದು ॥
ಅರ್ಣವಶಯನನ ಕರ್ಣಯುಗದಿ ನವ । ರತ್ನಕುಂಡಲಗಳೊಪ್ಪಿರಲು ॥
ಕನ್ನಡಿಗದಪಿನೊಳಗೆ ಬಿಂಬಿಸುತಲಿ । ಗನ್ನಮಿನ್ನಲೆನೆ ಶೋಭಿಸಿತು ॥೩೩

ಚೆಲ್ವರರಸನ ವೇಣಿಲಿ ... ... ನರವೃತ । ಚೆಲ್ಲಿ ದೆಸೆಗೆ ತುಂಬಿ ತುಳುಕಿ ॥
ಪಲ್ಲವಾಧರದಿ ಸೇವಿಸಿ ಗಲ್ಲೆಗಟ್ಟಲು । ಗಲ್ಲವೆಂಬಭಿಧಾನವಾಯಿತು ॥೩೮

ಅಂಬುಜವದನನಧರಪಾನವನು ಮಾಳ್ಪೆ । ವೆಂಬ ಧನ್ಯರು ನಾಲ್ವರುಂಟು ॥
ಕುಂಬು ಕೊಳಲು ಕಮಲಾದೇವಿ ಗೋಪನಿ । ತಂಬಿನಿಯರಿಗೆ ಪಾಲಾಯ್ತು ॥೩೯

ಉರದೊಳಗಿರ್ದು ವೇಳೆಯ ಕಾಯ್ದಳಿಂದಿರೆ । ಕೊರಳನ್ನೈದಿತು ವರಶಂಖ ॥
ಸರದಿ ಕೊಳಲಿಗಾದುದೆನುತ ಗೋಪಿಯರಾಗ । ಳುರುಬುತಿರ್ದರು ತವಕದಲಿ ॥೩೬

ನಳಿತೋಳ್ಗಳೆಂಬ ವಾಸುಕಿ ಬಿಟ್ಟವನು ಪೊತ್ತು । ಬಳಲುತಂಗುಲಿಮುಖದಿಂದ ॥
ಕೊಳಲ ರಂಧ್ರದ ಸುಧೆಯನು ಸೇವಿಸುವಪೊಲು । ಚೆಲುವೆಭುಜಗಳೊಪ್ಪಿತಾಗ ॥

ಇಂದ್ರನೀಲಾಚಲದೊಳು ಸುರನದಿಯು ತಾ । ಬಂದು ಪ್ರವಾಹಿಸುವಂತೆ ॥
ಇಂದಿರೇಶನ ವಕ್ಷಸ್ಸ್ಥಲದ ಮುಕ್ತಾಹಾರ । ದಂದ ಮೆರೆದುದಿಂದುವದನೆ ॥೩೮

ಇಂದಿರೆಯನು ನೋಡಲೆಂದು ಬಂದಿಂದುವಿ । ನಂದದಿಂ ಪೊಳೆವ ಪದಳವ ॥
ಬಂಧಿವುಜ್ಜುಗದಿ ನಾಭಿಯ ಬಿಲದಿಂ ಪರಿ । ತಂದ ಫಣಿಯೊ ರೋಮರಾಜಿ ॥೩೯

ಮೂರು ತತ್ವದೊಳಡಕೆವು ಜಗವೆಂಬುದ । ನೋರಂತೆ ಸಾರುವಂದದಲಿ ॥
ತೋರಿ ಸೂಚಿಸಿತು ತ್ರಿವಳಿ ಪೊಡೆಯೊಳು ನೋಡೆ । ಭೂರಿಯಜಾಂಡ ತುಂಬಿ
[ಹುದು ॥೪೦

ಕಟಿತಟದೊಳು ಕಟಿಪುಟಿಯಂತೆಸವ ಪೀತ । ಪಟದ ಕುಚ್ಚೆನ ಸೊಬಗಿಂದ ॥
ಪಟುತರಮಣಿಕಾಂಚಿದಾಮಕಿಂಕಿಣಿಗಳು । ನಟಿಸಿ ನಿತಂಬದೇಶದೊಳು ॥೪೧

ಇದಿರಿಲ್ಲವೀರೂಪಕೆಂಬ ಜಯಸ್ತಂಭ । ಕದಳಿಯಿಂ ಮೃದುತರೋರುಗಳು ॥
ಮದನನಂಬಿನ ಪೊದೆಗಳನೊದೆಯಲು ಜಂಘೆ । ಯದಕೆ ಮೇಲೆನಿಸೆ ಜಾನುಗಳು ॥

ತಾವರೆ ಪದಕೆ ಪಾಸಟಿಸೆಂದು ನೋಡಲು । ತಾವರೆಯಾದವೀಯಡಿಗೆ ॥
ಈವಸುಧಾವ್ಯೋಮದಳತೆಗೈದದ ಮೇಲಿ । ನ್ನಾವುದುಪಮೆಯಂಘ್ರಿಗಳಿಗೆ ॥೪೩

ಹರಿಯ ಪಾದವ ಬೊಮ್ಮ ತೊಳೆವಲ್ಲಿ ನಖಕಾಂತಿ । ಬೆರೆದು ಬಂದುದು ಬಾಂಬೊ
[ಳೆಯೊಳು ॥

ಶರಧಿಯೊಳಿರೆ ಮಥಿಸಲು ಶಶಿಯಾಗಿ ತಾ । ಮರಳಿ ಸೇರಿತು ವಿಷ್ಣುಪದವ ॥೪೪
ಮುರುಡುಗಲ್ಲನು ತರುಣಿಯ ಮಾಡಿತೀಪಾದ । ಸುರನದಿಯನು ಪೆತ್ತ ಪಾದ ॥
ದುರುಳಕಾಳಿಯ ಫಣಾಗ್ರದಿ ನಟಿಸಿದ ಪಾದ । ಪರಮಪವಿತ್ರವೀಪಾದ ॥೪೫
ಒಂದು ಪಾದದೊಳು ಮತ್ತೊಂದು ಪಾದವನೂರಿ । ಒಂದೆಸೆಗೊಲಿದು ಮಧ್ಯವನು ॥
ಕಣ್ದೆರೆ ಷೇಣುರಂಧ್ರದ ಮೇಲೆ ಪಸರಿಸು । ವಂದದಿ ಕುಡಿವುರ್ಬ್ ಕುಣಿಯ ॥೪೬
ಕೊಂಕುಕೊರಳಿನ ಬಿಂಕದಿ ಕೊಳಲೂದುತ । ಲಾಂಕಿ ಬಿಡುತ ಬೆರಳುಗಳ ॥
ಕಂಕಣ ಕಡಗ ಝೀಂಕೃತಿಸರಗೂಡುತ । ಪಂಕಜಾಕ್ಷನ ಮೂರ್ತಿ ಮೆರೆಯ ॥೪೭
ಕೋಟಿಕಂದರ್ಪರೂಪನ ಕಾಣಲಾಕ್ಷಣ । ನಾಟಿತೆದೆಯೊಳು ಕಾಮಾಸ್ತ್ರ ॥
ನೋಟದೊಡನೆ ಮನ ಸಿಲುಕಿ ಕೃಷ್ಣನಲಿ ಕಾ । ಲಾಟವಡಗಿತಾಕಾಂತೆಯರಾ ॥
ಹದುಳ ತಪ್ಪಿತು ಮನ ತೊದಲನೈದಿತು ನುಡಿ । ಬೆದರಿ ಭ್ರಮಿಸಿತು ನೇತ್ರಗಳು ॥
ಕದಬು ವೆಗ್ಗಳಿಸಿ ಕಂಪಿಸಿತಂಗವಡಿಗಡಿ । ಗೊದರೆ ನವಿರುಬೆಮರುಗಳು ॥೪೯
ಮಾತನಾಡಲು ಮುಂದುದೋರದು ಚಿತ್ತ ಕಾ । ಮಾತುರ ಸೈರಣೆಗೊಡದು ॥
ಈತೆರದಿಂ ಬಳಲುವ ಕಾಂತೆಯರ ಕಂಡು । ಮಾತನಾಡಿದನಸುರಾರಿ ॥೫೦
ಏನು ಬಂದಿರಿ ಮಾನಿನಿಯರು ರಾತ್ರಿಯೊಳಿಲ್ಲಿ । ಕಾನನಾಂತರಕೆ ನೀವೆನಲು ॥
ಮೌನದಿಂ ನೆಲವನುಂಗುವದಿ ಬರೆಯುತ ಮ । ತ್ತಾನಂದಾಶ್ರುಗಳ ಸುರಿಯಲು ॥
ಭಾವವ ತಿಳಿದು ನೇಮಿಸಿದನವರೊಳು ಮ । ತ್ತೀವಗೆ ತರವಲ್ಲ ನಿಮಗೆ ॥
ಭಾವಿಸಿ ನೋಡೆ ಪತಿಯೆ ದೈವ ಗತಿಗೆ ಬೇ । ರಾವ ಕರ್ಮದ ಗತಿಯುಸುವು ॥೫೦
ಪಾತಿವ್ರತ್ಯವಳಿವರೆ ಪರಲೋಕಕ್ಕೆ । ಘಾತಕರಹಿರಿ ನೀವಿನ್ನು ॥
ಮಾತನಾಡದೆ ಮನೆಗೈದುವುದೆನಲು ಮ । ತ್ತಾತರುಣಿಯರೆಂದರಾಗ ॥೫೩
ಪರಪುರುಷರನು ಬಯಸಲಿಲ್ಲ ಸಾಕ್ಷಾತ । ಪರಮಪುರುಷನ ನಂಬಿದೆವು ॥
ಪೆರವನೊಲ್ಲೆವು ನಿಮ್ಮ ಚರಣವೆ ಸಾಕೆಮ । ಗೊರೆಯದಿರಿ ಪುರಾಣಗಳನು ॥೫೪
ವಾರಿಜಭವಭವಸನಕನಾರದರು ಮ । ತ್ತಾರ ಪಾದವ ಭಜಿಸುವರು ॥
ಬೇರ ಬಲ್ಲರಿಗೆಲೆಯನು ತೋರದಿರು ಕೃಷ್ಣ । ತೀರದೀಮಾಯವೆಮ್ಮಡನೆ ॥೫೫

ಅಂಬುಜಾಂಬಕ ನಿನ್ನ ಸ್ಮರಿಸಿ ಪತಿವ್ರತೆ । ಯೆಂಬಂತೆ ಪರಪುರುಷರನು ॥
ಪಂಬಲಿಸಿದರೆ ಪಾದರದ ಪೆಣ್ಣಿವಳೆಂದು । ಮುಂಬಲ್ಲಕಿಳರೆ ಬಲ್ಲವರು ॥೫೬

ಧಾರಿಣೀಪತಿ ಪರಿಗ್ರಹಿಸಿ ಬಳಿಕ ತಳಿ । ವಾರರಿಂದಹ ಕಾರ್ಯವೇನು ॥
ಈರಹುಣೀಯಮೂರ್ತಿಯ ಕೆಂಡಧನ್ಯರ । ದಾರಿವಿಡಿವುದೆ ಪಾತಕೆವು ॥೫೭

ಕೆಡೆದ ಕೈಯಂಗವೀನವು ಲಭಿಸಲು ನೀರ । ಕೆಡೆದು ಬರುವ ಭಾಗ್ಯವೇನು ॥
ಒಡವೆ ಕೈಸೇರಿದ ಬಳಿಕ ನೆಲದಿ ಬರಿ । ಹುಡಿಯ ತಡಕಿ ಬಳಲುವರೆ ॥೫೮

ಯಾಗಯಜ್ಞಾದಿಕರ್ಮದಿ ಬಹ ಫಲವು ತಾ । ನಾಗಿ ಸಿದ್ಧಿಸಿದ ಮೇಲಿನ್ನು ॥
ಯೋಗಾನಂದವನನುಭವಿಸದೆ ಕರ್ಮದ । ಬೇಗೆಯಿಂ ಬಹ ಫಲವೇನು ॥೫೯

ಬಹಳ ಬಿನ್ನವಿಸಲೇತಕೆ ಚೆತ್ತವರಿಯದೆ । ಸಹಜವೆಂಬುದನಂತರಾತ್ಮ ॥
ವಿಹಿತವಿಲ್ಲೆಂದುಪೇಕ್ಷಿಸಿ ದೇಹವನು ಬಿಟ್ಟು । ಸಹಿಸಿ ನಿನ್ನೊಳು ಬೆರಸುವೆವು ॥೬೦

ಎನಲು ಗೋಪಿಯರ ನಿಜವ ಕೆಂಡು ಕೃಷ್ಣ ತಾ । ನನುಪಮಾನಂದವಾರ್ಧಿ
[ಯೊಳು ॥
ನನಸಿ ತಕ್ಕವಿಸಿ ಕೆಂಬನಿಯನೊರಸಿದ ತಾ । ನೆನಿತೊ ಕಾಂತೆಯರ ಪೌಭಾಗ್ಯ ॥

ಆವನ ಪದವನರಸಿ ಕಾಣಲಾರದೆ । ಬೇವರು ತಪವನಾಚರಿಸಿ ॥
ಈವನಿತೆಯರ ಪುಣ್ಯದ ಕೆಡೆಮೊದಲು ತಾ । ನಾವುದೆಂಬುದ ಬಲ್ಲರಾರು ॥೬೩

ರಂಗನ ವಾಕ್ಯಸುಧಾಪಾರಾವಾರತ । ರಂಗದೊಳಾಳಿ ಮುಳುಗುತ ॥
ಅಂಗನಾಮಣಿಗಳಾ ಲಿಂಗನಗೈದು ನೀ । ಲಾಂಗನ ಸುತ್ತುವರಿದರು ॥೬೩

ನಿಗಮಶಿರೋಮಣಿಯೆಂಬಿಂದ್ರನೀಲಕೆ । ಬಿಗಿದ ಕುಂದಣಗಳೆಂಬಂತೆ ॥
ಬಿಗಿಯಪ್ಪಿ ಕೃಷ್ಣಮೂರ್ತಿಯೊಳಾನಂದಿಸಿದರು । ಮೃಗನಯನೆಯರೆಡೆಬಿಡದೆ ॥

ಮಾಧವ ವೇದಪಾದಪವಾಗಿ ಗೋಪಿಯ । ರಾದರಾಶಾಕೆಗಳೆಂತೆ ॥
ಮಾಧುರ್ಯವೇಣುರವಾಮೃತಸ್ವರವೆನ । ಲಾದಿಪುರುಷನೆಸೆದಿರ್ದ ॥೬೫

ಒಬ್ಬ ಕೃಷ್ಣಗೊಬ್ಬ ಗೋಪಕಾಮಿನಿಗೊಬ್ಬ । ಶ್ರೀಪತಿಯೋಪರಿಯೆನಿಸಿ ॥
ಒಬ್ಬರೊಬ್ಬರನು ಕೈವಿಡು ಮಂಡಲದಂತೆ । ವ್ಯಾಪಿಸಿ ಸುತ್ತುವರಿದರು ॥೬೬

ಅನಿತು ಗೋಪಿಯರಿಗನಿತು ಕೃಷ್ಣನಾದನು । ಕನಕನೀಲದ ಮಣಿಗಳನು ॥
ಪಿನಿತೆ ವಲ್ಲಭಭುಜಸೂತ್ರಗರ್ಭಿತಮಾಗಿ । ದ್ರನುಪಮೈಕಾವಳಿಯಂತೆ ॥೬೩

ಮಂಡಲಮಧ್ಯದೊಳಗೆ ನಿಂದು ಹರಿ ಹರಿ । ಮಂಡಲಾಂತರ್ವರ್ತಿಯಂತೆ ॥
ಪುಂಡರೀಕಾಕ್ಷನಾಡಿದನು ರಾಸಕ್ರೀಡಾ । ತಾಂಡವನೃತ್ಯಲೀಲೆಗಳಾ ॥೬೪

ಕುಂಜರಗಾಮಿನಿಯರ ಕರರಂಜಿಪ । ಮಂಜೀರಜಾನುಕಂಕಣದ ॥
ಜಿಂಯುಣತ್ಕಾರರವಂ ಜತೆಗೂಡೆ ತಾ । ರಂಜಿಸಿತಾವೇಣುನಿನದ ॥೬೯

ಇಂತಾಡುತಿರೆ ಗೋಪಕಾಂತೆಯೊರ್ವಳು ತಾನೇ । ಕಾಂತವಾಡುವ ವ್ಯಾಜದಿಂದ ।
ಕೆಂತುಪಿತನ ಕೆದಪನು ಜುಂಬನಂಗೈದ । ಳೆಂತೊ ಕಾಮಿನಿಯ ಸೌಭಾಗ್ಯ ॥೭೦

ನೃತ್ಯದೊಳಂಗನೆ ತತ್ತರಿಸಲು ಕೃಷ್ಣ । ನೆತ್ತಲದೆ ವ್ಯಾಜದಿಂದ ॥
ವೃತ್ತಕುಚವನೆದೆಗೊತ್ತಿ ತಕ್ಕವಿಸಿದ । ಳುತ್ತರಿಗೆಯ ಜಘನಗಳ ॥೭೧

... ... ॥೭೨

ಇಂತೀ ಶ್ರೀಶೃಂಗಾರದ್ವಿತೀಯಸಪ್ತತಿ ಸಂಪೂರ್ಣಂ.

—ಶೃಂಗಾರ ತುರೀಯಸಪ್ತತಿ—

... ...

... ...

ಇಂತು ಕಾಂತೆಯರ ಗರ್ವವ ಕೆಂಡು ಕೃಷ್ಣ ತಾ | ನಂತರ್ಧಾನವನು ಸೈಕೊಂಡ ||
ಕಾಂತಾರಮಧ್ಯದೊಳಗೆ ಕಾಂತಾಮಣಿಗಳು | ಭ್ರಾಂತರಾದರು ಮರುಕೊಳಿಸಿ ||

ಸಿರಿ ಕೈಸೇರಿದುದೆಂದು ಗರ್ವಿಸಿ ಮುನ್ನ ತ | ನ್ನಿರವನು ಮರೆತು ಬಾಲಕರ ||
ಪರಿಯನರಿಯದಪರಾಧಗೈವನ ಸಿರಿ | ಸರಿದುದೆಂಬಂತಾದರಾಗ ||೮೭

ಲೇಸುದಪ್ಪಿದ ವೇಳೆಯೊಳು ಲೋಗರೊಳು ತಮ್ಮ | ಕ್ಲೇಶವನರಿವುವಂದದಲಿ ||
ಆಸುದತಿಯರು ಪಂಬಲಿಸುತಿರ್ದರು ವನ | ವಾಸಚರಾಚರದೊಡನೆ ||೮೮

ಮಾಮರಗಳಿರೆಮ್ಮವೊಲು ನಿಮ್ಮಂಗದಿ | ಕಾಮಬಾಣಗಳೊದವಿದೆಕೊ ||
ತಾಮರಸಾಕ್ಷನ ಕೆಂಡಿರೆಯೆನುತಲಾ | ಸೀಮಂತಿನಿಯರು ಕೇಳುವರು ||೮೯

ಮೃಗವಧುಗಳಿರಘಹರನ ಕೆಂಡಿರೆ ನಿಮ್ಮ | ದೃಗುಯುಗ ಬೆದರುತೆಮ್ಮಂತೆ ||
ದಿಗುವಿವರವನೀಕ್ಷಿಸುವದಾರನೆನುತಲಾ | ಮೃಗನೇತ್ರೆಯರು ಕೇಳುತಿಹರು ||೯೦

ಅರವಿಂದಗಳಿರ ಭಕ್ತಿಯೊಳು ನೀವಾರಿಗೆ | ಕರಗಳ ಮುಗಿದು ನಿಂದಿಹಿರಿ ||
ಪರಮಪುರುಷನ ಕೆಂಡಿರೆ ನೀವೆನುತ ಗೋಪ | ತರುಣಿಮಣಿಗಳು ಕೇಳುವರು ||೯೧

ಅತ್ತಲಾಗೋಪಕಾಮಿನಿಯೊರ್ವಳೊಡಗೂಡಿ | ಚಿತ್ತಪಿತನಾಡುತಿರಲು ||
ಮತ್ತಕಾಸಿನಿಯರರಸುತೈದುತಿರೆ ನದಿ | ಯೊತ್ತಿನೊಳ್ಕಂಡರಡಿಗಳ ||೯೨

ಇದೆ ಕೃಷ್ಣನ ಪಾದಾಂಕಿತವಿದೆಯಂಕುಶ | ಪದುಮಧ್ವಜದ ಪುರುಹಿದೆಕೊ ||
ಸುದತಿಯಾವಳೊ ಕಾಂತನೊಡನೈದಿದಳು ಪಜ್ಜಿ | ಯಿದೆಯೆಂದರಾಚದುರೆಯರು ||

ಎನುತಲಾಪದವನೆದೆಯೊಳಪ್ಪಿ ಮರಗುತ | ಘನತಾಪದಿಂ ಖಸವಳಿದು ||
ಬನದೊಳು ಕಾಮಕೇಸರಿಗೊಪ್ಪಿಸದಿರೆಮ್ಮ | ನನುಪಮೆಯೆಂದಳಲಿದರು ||೯೪

ಪಂತ ಸಂದುದೆ ನಿಮ್ಮ ಪಿಷ್ಟೆಂದು ಕಾಮ ವ । ಸಂತ ಸಂತಸವಾಯ್ತು ನಿನಗೆ ॥
ಇಂತೆನುತಬಲೆಯರಚ್ಯುತಾಂಘ್ರಿಯೊಳು ಹಾ । ಕಾಂತಯೆಂದೊರಗಿದರಾಗ ॥೩೫
ಅತ್ತಲಚ್ಯುತನೊಡನೈದಿದಬಲೆ ತಾನೆ । ಉತ್ತಮೆಯನಿಬರೊಳೆನುತ ॥
ಚಿತ್ತಜಪಿತನೊಳಗಾಡಿದಳಾ ಗೋಪ । ಮತ್ತಕಾಶಿನಿ ಗರ್ವದಿಂದ ॥೩೬
ಅತಿಮೃದುವಾದೆನ್ನಂಘ್ರಿಗಳು ಕಾಂತಾರದ । ಕ್ಷಿತಿಯೊಳೊರಲು ಪದಗತಿಗೆ ॥
ಮತಿಯೊಳು ಮರುಕವಿಲ್ಲೆಲೆ ಕೃಷ್ಣ ನಿನಗೆಂದಾ । ಸತಿ ನುಡಿದಳು ಹರಿಯೊಡನೆ ॥
ಎನಲು ಮಾಯಾಧೀಶನೆಂದನಬಲೆಯೊಡ । ನಿನಿತುವರಿಯೊಳೆಚ್ಚರಿಸಿದೆ ॥
ವನಜಾಕ್ಷಿ ಬಳಲಿದೆ ಬಾಯೆನ್ನ ಭುಜವನೇ । ರೆನುತ ವಿನಯದಿ ಮಂಡಿಸಿದ ॥೩೮
ಕಾಂತೆ ಮೆಲ್ಲನೆ ಸಂವರಿಸಿದಳು ಸಿರಗಶ್ರೀ । ಕಾಂತನ ಭುಜವನೇರುವರೆ ॥
ಸಂತಸದಿಂದಡರುವ ವೇಳೆಯೊಳು ಕೃಷ್ಣ । ನಂತರ್ಧಾನವ ಕೈಕೊಂಡ ॥೩೯
ಮೃಗನಯನೆಯರೊಡನಾಡಲವರು ಬಂದು । ಬೆಗಲನೇರಪೆ ಬಡಕೆಂಬ ॥
ಬಗೆಯನರಿಪಲಾಮಾನಿನಿಗೆ ಬುದ್ಧಿಯನಿತ್ತ । ನಗಧರ ಜಗದನುಗ್ರಹದಿಂ ॥೪೦
ಜನನಾಥನೊಲುಮೆಯುಳ್ಳಾಗ ತನ್ನವರನು । ಗಣಿಸದರಲು ಕಾಲಾಂತರದಿ ॥
ಜನಪ ಮುನಿದ ವೇಳೆಯೊಳು ಲೋಕದಿಂದ ತಾ । ನಳುಕುಗೊಳ್ವೊಲಾದಳಬಲೆ ॥
ಅತ್ತಲಾವನಿತೆ ಸಮೂಹವನಗಲಿದ । ಚಿತ್ತಲಗಲಿದಳಚ್ಯುತನಾ ॥
ಸುತ್ತಲೆತ್ತಲುಮಿತ್ತಬಾಯೆಂಬರಿಲ್ಲಳ । ಲುತ್ತಲಿರ್ದಳು ಕಾಂತೆ ಬನದಿ ॥೪೩
ಇತ್ತಲಾಕಾಮಾವಸ್ಥೆಯೊಳಿರ್ದ ಕಾಂತೆಯ । ರೊತ್ತಿನೊಳ್ ಕೊಳಲ ನುಡಿಸಲು ॥
ಮತ್ತಕಾಶಿನಿಯರೆಚ್ಚತ್ತು ಕಂಡರು ಪ್ರಣ । ತಾರ್ತಿಹರನ ದಿವ್ಯಾಕೃತಿಯಾ ॥೪೩
ಅಗಲಿದ ಸಿರಿ ಕೈಸೇರಿದವೊಲಾಕಾಂತೆಯ । ರಘಹರಮೂರ್ತಿಯನಪ್ಪಿ ॥
ದೃಗುಯುಗದೊಳು ಬಾಷ್ಪವುಗಲು ಕಂಠಸ್ವರ । ಬಿಗಿಯಿ ಬಿನ್ನೈಸಿದರಾಗ ॥೪೪
ಆರಿಗಾವಸರಾಧಿಗಳು ದೇಹೇಂದ್ರಿಯಬುದ್ಧಿ । ಯಾರ ಸೂತ್ರದೊಳಾಡುತಿಹುದು ॥
ಆರನಾರೈಸುವುದೀಜೀವ ಬರಿದೆ ನೀ । ನಾರ ಮುನಿವೆ ಕೃಷ್ಣಯೆನಲು ॥೪೫
ಅಂತರಾತ್ಮಕನೆಂಬುದನು ಕಂಡ ಬಳಿಕೆ ವಿ । ಭ್ರಾಂತಿಯೆಂದೇಕರಸುವಿರಿ ॥

ಕಾಂತೆಯರಿರ ನಿಮ್ಮ ನಗಲುವೆನೆಂತೆಂದು । ಸಂತವಿಸಿದ ಕೃಷ್ಣನವರ ॥೪೬
ಇಂತು ಶ್ರೀಕಾಂತನಿವರೊಳಾಡುತಿರೆ ಗೋಪ । ಕಾಂತೆಯೊರ್ವಳೆ ಬನದೊಳಗೆ ॥
ಕಂತುಜನಕನನರಸುತಿರೆ ಮೇಣುರ । ವಂ ತಾ ಕೇಳಿಸಿತನಿತಕೊಳು ॥೪೭
ಸರವ ನೆಂಬಳಿಗೊಂಡ್ಯೆದುವಳಲ್ಲಿ ಕಾಣದೆ । ಯಿರಲು ಪಂಬಲಿಸಿ ಬಳಲುವಳು ॥
ಕರುಣಾರ್ಣವನೆಯೆಂದು ಕರೆಯುತ್ತೆತರೆ ಮುಂದೆ । ನೆರವಿ ಕಾಣಿಸಿತು ಗೋಪಿ
[ಯರ ॥೪೮

ಬಂದಳಾತರುಣಿ ಗೋವಿಂದನಂಘ್ರಿಯನಶ್ರು । ಬಿಂದುಗಳಿಂ ತೊಳೆಯುತವಿ ॥
ಚಂದನತಿಲಕಮುಡಿದಪ್ರಾಸರಗಳಿಂದ । ಎಂದುವದನೆ ಪೂಜಿಸಿದಳು ॥೪೯
ಪದುಮಾಕ್ಷನಾಮಾನಿನಿಯನು ಸಂತವಿಸುತ । ಸುದತಿಯರೊಡನೆಂದನಾಗ ॥
ಇದುವೆ ಸಮಯ ಜಲಕೇಳಿಗೆ ನಿರ್ಮಲ ।ದುದಕವಿದಿಕೊಯೆಂದ ನಗುತ ॥೫೦
ಎನಲು ಕಂಡರು ಕಾಮಿನಿಯರು ಕಾಳಿಂದಿಯ । ನನುಪಮನೀಲಾಂಗನೆಂಬ ॥
ಘನವರ್ಷಾಂಬುಪ್ರವಾಹದಂತಿಪ್ಪ ನದಿ । ಯೆನುತ ಬಂದರು ಹರಿಯೊಡನೆ ॥೫೧
ಅಂಬುಜಾಂಬಕನಿದನು ಸಲಿಲದೊಳು ನಿ । ರಂಬಿನಿಯರನೊಡಗೂಡಿ ॥
ಲಂಬುಜಸಂಸಕಾರಂಡಕುಮುದತತಿ । ತುಂಬಿದಂಬುವಿನೊಳಾಡಿದನು ॥೫೨
ರಂಗನಂಗನನಪ್ಪಿದನು ನಜೀವನಿತೆ ತ । ರಂಗಭುಜಂಗಳಿಂದೊಲಿದು ॥
ಸಂಗಸುಖವನು ಸಾರೂಪ್ಯವನಿತ್ತು ನೀ । ಲಾಂಗನ ಯಮುನೆ ಸಂತೈಸಿ ॥೫೩
ಆದುದಚ್ಯುತಜಲಕೇಳಿ ಗೋಪಿಯರು ವಿ । ನೋದದಿಂದುಟ್ಟರಂಬರವ ॥
ಮಾಧವನೊಡನಾಡುತಲ್ಲಿ ಬೃಂದಾವನ । ವಿಂದಲೈದಿದರು ನೋಕುಲಕೆ ॥೫೪
ಎನಲು ಸಾಕ್ಷಾದ್ವಿಷ್ಣುವೆ ಪರವನಿತೆಯ । ರನು ವ್ರತಭಂಗಗೊಳಿಸಲು ॥
ಮನುಜರಿಗನುಗ್ರಹವಾದುವೆಂದಾಮನ । ವನಿತೆ ಕೇಳಿದಳು ವಲ್ಲಭನ ॥೫೫
ಎಂದೊಡೆಂದನು ಚೇತನನು ತನ್ನ ಸತಿಗೆ ಗೋ । ವಿಂದನೀಜಗದ ಮಾನವನೆ ॥
ಬಾಂದೊರೆದಳೆದವನಿಗೆ ದಕ್ಕಿತೆನೆ ನರ । ತಿಂದು ಬಾಳುವನೆ ವಿಷವನು ॥೫೬
ಬೃಂದಾವನದಿ ಹರಿಯೊಡನಾಡುವರು ತಮ್ಮ । ಮಂದಿರಗಳೊಳಾಣ್ಮರೊಡನೆ ॥

ಎಂದಿನಂದದೊಳಿಹರೀ ಗೋಪಿಯರು ಕಾಲ । ಪೊಂದರೊಳಚ್ಯುತಾಜ್ಞೆಯಲಿ ॥೫೭
ಅರಿಗುಂಟೀ ಸಾಹಸದ ಪರಿ ಸಾಕ್ಷಾತ । ನಾರಾಯಣಗಲ್ಲದಿತರ ॥
ಜಾರನಬಲೆಯೊಡನಿರುವಲ್ಲಿ ಸತಿಯು ತಾ । ಬೀರೆ ತೋರಿಸುವನೆಂತಕಟ ॥೫೮
ಗೋಪವಧೂಜಾರನೆಂದು ಸ್ಮರಿಸಿದರೆ । ಪಾಪ ಪೊದ್ದದು ಮನುಜರಿಗೆ ॥
ತಾಪತ್ರಯಗಳಡಗುವುವು ಮುಕ್ತ್ಯಂಗನೆ । ತಾ ಪರಿಗ್ರಹಿಸುವಳವನಾ ॥೫೯
ಕಾಮವಾವುದು ಪರಿಪೂರ್ಣಕಾಮನಿಗೆ ತಾ । ನೇಮವಾವುದು ನಿಯಾಮಕಗೆ ॥
ಈಮಾನಿನಿಯರಭೀಷ್ಟವ ಸಲಿಸುವರೆ ನಿ । ಷ್ಕಾಮದಿಂದವರೊಳಾಡಿದನು ॥೬೦
ಸೃಷ್ಟಿಗೋಸುಗ ಮಿಥುನದ ವಿಕಾರಗಳ ತಾ । ಕಟ್ಟುಮಾಡಿಸಿದ ಕಾಮನಿಗೆ ॥
ಪಟ್ಟದೊಡೆಯನ ತೆರಿಗೆಯ ಕೇಳುವನೆ ತಾ । ನಿಟ್ಟ ಮನುಜನವನಿಯೊಳು ॥೬೧
ಸತಿಪತಿಗಳ ದೇಹದೊಳಗಿಹ ಪರಮಾತ್ಮ । ನತುಲಿತಮೂರ್ತಿಯ ವಹಿಸಿ ॥
ಸತಿಯರೊಳಾಡಿದೊತಾವುದು ಭೇದ ತಾ । ಪೃಥಗಾತ್ಮನೆಂದೆಣಿಸುವರೆ ॥೬೨
ಘಟದೊಳುದಕವ ತರಲು ವರ್ಣಭೇದಸಂ । ಕಟ ಮುಟ್ಟಲಾಗದೆಂಬಂತೆ ॥
ಕೆಟಕಟ ಗಂಗೆಯೊಳಾರಿಗಾದೊಡೆಯುಸಂ । ಘಟಿಪುದೆ ಸ್ಪರ್ಶಭೇದಗಳು ॥೬೩
ರತಿನಾಯಕನ ಭೃತ್ಯರಿಗೆ ಗತಿಯಾವುದೀ । ಕ್ಷಿತಿಯೊಳು ಶೃಂಗಾರವೆಂಬ ॥
ಮತಿಗೊಂಡಾದರು ಕೃಷ್ಣಕಥೆ ಕಿವಿವುಗಲು ಸ । ದ್ಗತಿಯನೈದುವರವರೆಂದ ॥೬೪
ಪತಿತಪಾವನ ಪುಣ್ಯಚರಿತ ಮಾಧವ ಗೋಪ । ಸತಿಯರ ಕೇಳೀವಿಲಾಸ ॥
ವ್ರತಜಪತಪಶತಕ್ರತುವಮಾಡಲು ಭಾಗ । ವತದೊಳಕ್ಕರಕೆಣಿಯಹುದೆ ॥೬೫
ಶುಕಮಹಾಯೋಗೀಂದ್ರರೀಕಥೆಯನು ಹರಿ । ಭಕ್ತಪರೀಕ್ಷಿತಗೊಲಿದು ॥
ಸಕಲಾಗಮಾರ್ಥಸಂಗ್ರಹವಿದೆಂದರಸನೊ । ಳಕಳಂಕಮುನಿಪ ನೇಮಿಸಿದ ॥೬೬
ಗಂಗಾದಿಸರ್ವತೀರ್ಥಸ್ನಾನ ಗೋವನಂ । ತಂಗಳ ದಾನನಿತ್ತೊಡೆಯು ॥
ರಂಗಯಿಂಬೆರಡಕ್ಕರಕೆ ಪಾಸಟಿಯೆ ಮೋಹ । ನಾಂಗ ಕೇಳೀರಹಸ್ಯವನು ॥೬೭
ಬೇಕೆಂಬ ಪುರುಷಾರ್ಥ ಬಂದು ನಿಮಿಷದೊಳು । ತಾ ಕೈಯ ಮುಗಿದು ಕಾದಿಹದು ॥
ಕೋಕನದಾಹ್ವನ ಕೈತಿಯ ಭಕ್ತಿಯೊಳು ವಿ । ವೇಕದಿಂ ಕೇಳ್ವ ಮಾನವಗೆ ॥೬೮

ಇದು ಕೃಷ್ಣಗೋಪೀವಿಲಾಸಮೂರ್ತಿಧ್ಯಾನ । ವಿದು ಮುಕ್ತಿಮಾರ್ಗಸೋಪಾನ॥
ಯದುಶುಲೀಶನ ವೇಣುಗಾನಸುಧಾಪಾನ । ಹೃದಯದಿ ನೆಲಸೆ ಸುಮ್ಮಾನ ॥೬೯
ಶುಕಮುಖಗಳಿತಫಲವನು ವಂಚಿಸದೆ ಮ । ತ್ಸಕರುಂಡು ಸುಖಿಯಾಗಲೆಂಬಾ ॥
ಸಕತಿಯಿಂದೆ ತಿಲಾನವೆಂಬೀ ವ್ಯಾಜದಿ । ಭಕುತವತ್ಸಲ ತಾನೆ ಪೇಳ್ದ ॥೭೦

ಇಂತೀ ಶ್ರೀಶೃಂಗಾರತುರೀಯಸಪ್ತತಿ ಸಂಪೂರ್ಣಂ.

ಕೃಷ್ಣಗೋಪೀವಿಲಾಸಂ

ಸಮಾಪ್ತಂ.

ಕರ್ಣಾಟಕ ಕಾವ್ಯಕಲಾನಿಧಿ ಗ್ರಂಥಗಳ ಪೆಟ್ಟಿ.

ಈ ಕೆಳಗಣ ಗ್ರಂಥಗಳೆಲ್ಲವೂ ಪ್ರಾಯಕವಾಗಿ ಕನ್ನಡ ಭಾಷೆಯಲ್ಲಿ ಅತ್ಯುತ್ತಮ ವಾದುವುಗಳು. ಇವುಗಳಲ್ಲಿ ನಿಘಂಟುಗಳು ಹೊರತು ಉಳಿದ ಗ್ರಂಥಗಳೆಲ್ಲವೂ ಮದ್ರಾಸು, ಬೊಂಬಾಯಿ ಯೂನಿವರ್ಸಿಟಿ ಪರೀಕ್ಷೆಗಳಿಗೂ, ಮೈಸೂರು ದೇಶೀಯ ಪರೀಕ್ಷೆಗಳಿಗೂ, ಬೊಂಬಾಯಾಧಿಪತ್ಯದ ಭಾಷೋಜ್ಜೀವಿನೀ ಪಾಠಶಾಲೆಗಳಿಗೂ ದೇಶಭಾಷಾ ಗ್ರಂಥಗ ಳಾಗಿ ನಿರ್ಣೀತವಾದುವು.

ಕವಿಯ ಕಾಲ ಕ್ರಿ. ಶ.	ಕವಿಯೂ ಗ್ರಂಥವೂ	ಕ್ರಯ ರೂ.	ಆ.	ಪೈ.
	ಚಂಪೂ ಗ್ರಂಥಗಳು :—			
993	ಮಹಾಕವಿ ರನ್ನನ ಗದಾಯುದ್ಧ	1	6	0
993	ಮಹಾಕವಿ ರನ್ನನ ಅಜಿತತೀರ್ಥಕರ ಪುರಾಣ ತಿಲಕಂ ..	1	9	0
1105	* ಅಭಿನವಪಂಪ ಅಥವಾ ನಾಗಚಂದ್ರನ ಮಲ್ಲಿನಾಥಪುರಾಣಂ			
1145	ದುರ್ಗಸಿಂಹನ ಪಂಚತಂತ್ರಂ (ಸಟಿಪ್ಪಣಂ) ..	3	0	0
1165	* ಹರಿಹರದೇವನ ಗಿರಿಜಾಕಲ್ಯಾಣ			
1170	ಕವಿಕುಂಜರಾಭಿದ ನೇಮಿಚಂದ್ರನ ಲೀಲಾವತೀ ಪ್ರಬಂಧಂ..	3	8	0
1170	,, ಅರ್ಧನೇಮಿ ಪುರಾಣಂ	1	9	0
1189	ಅಗ್ಗಳದೇವನ ಚಂದ್ರಪ್ರಭಪುರಾಣಂ—ಅಗ್ಗಳ ಲೀಲಾವತಿ ..	4	0	0
1209	ಕರ್ಣಾಟಕ ಕವಿ ಚಕ್ರವರ್ತಿ ಜನ್ನನ ಶಾಸನಗಳ ಸಂಗ್ರಹ ..	0	2	6
1209	,, ಯಶೋಧರ ಚರಿತೆ, ಸಟಿಪ್ಪಣಂ ..	1	2	0
1235	ಕಮಲಭವನ ಶಾಂತೀಶ್ವರ ಪುರಾಣಂ	4	8	0
1235	* ಆಂಡಯ್ಯನ ಕಬ್ಬಿಗರ ಕಾವಂ, ಸಟಿಪ್ಪಣಂ			
1300	ಚೌಂಡರಾಯನ ಅಭಿನವ ದಶಕುಮಾರ ಚರಿತೆ ..	3	10	0
1528	ಅಭಿನವ ವಾದಿವಿದ್ಯಾನಂದನ ಕಾವ್ಯಸಾರಂ	2	4	0
1700	ತಿರುಮಲೆಯಾರ್ಯನ ಚಿಕದೇವರಾಜ ವಿಜಯಂ.. ..	2	4	0
1700	ಚಿಕುಪಾಧ್ಯಾಯನ ದಿವ್ಯಸೂರಿ ಚರಿತೆ	1	2	0
1700	ಗೋಪಾಲಪ್ರಸಾದಿಯ ಚಿಕದೇವೇಂದ್ರ ವಂಶಾವಳಿ ..	0	4	6
	ಷಟ್ಪದೀ ಗ್ರಂಥಗಳು :—			
1165	* ರಾಘವಾಂಕನ ಹರಿಶ್ಚಂದ್ರಕಾವ್ಯ (ವಾರ್ಧಿಕ) ..			
1369	* ಗುಬ್ಬಿ ಮಲ್ಲಣಾರ್ಯನ ಭಾವ ಚಿಂತಾರತ್ನಂ (ವಾರ್ಧಿಕ) ..			

ಕರ್ಣಾಟಕ ಕಾವ್ಯಕಲಾನಿಧಿ ಗ್ರಂಥಗಳ ಪಟ್ಟಿ

ಕ್ರಿ. ಶ.		ರೂ.	ಆ.	ಪೈ.
1424	ಭಾಸ್ಕರನ ಜೀವಂಧರ ಚರಿತೆ (ಭಾಮಿನಿ)	2	4	0
1509	ಮಂಗರಸನ ಜಯನೃಪಕಾವ್ಯ (ಪರಿವರ್ಧಿನಿ) ..	2	8	0
16 ಶ.	ಕನಕದಾಸನ ನಳಚರಿತ್ರೆ (ಭಾಮಿನಿ)	0	12	0
16 ಶ.	ಗುರುಲಿಂಗವಿಭುವಿನ ಭಿಕ್ಷಾಟನ ಚರಿತೆ, ಸವ್ಯಾಖ್ಯಾನ (ವಾರ್ಧಿಕ)	1	0	0
16 ಶ.	✦ ಕುಮಾರ ವಾಲ್ಮೀಕಿಯ ಪೈರಾವಣನ ಕಾಳೆಗ (ಭಾಮಿನಿ)			
17 ಶ.	ತಿರುಮಲೆವೈದ್ಯನ ಉತ್ತರ ರಾಮಾಯಣಂ (ಭಾಮಿನಿ) ..	2	4	0
19 ಶ.	ಮಹಾಲಕ್ಷ್ಮಿಯ ಶ್ರೀರಾಮ ಪಟ್ಟಾಭಿಷೇಕಂ (ವಾರ್ಧಿಕ) ..	1	0	0
17 ಶ.	ಗೋಪಕವಿಯ ನಂದೀಮಹಾತ್ಮ್ಯಂ (ವಾರ್ಧಿಕ) ..	1	0	0
18 ಶ.	ಕೋನಯ್ಯನ ಗಯಚರಿತ್ರೆ (ಭಾಮಿನಿ)	2	14	0

ಗದ್ಯ ಗ್ರಂಥಗಳು :—

17 ಶ.	ತಿರುಮಲೆಯಾರ್ಯನ ಚಿಕದೇವರಾಯ ವಂಶಾವಳಿ ; ಹಳಗನ್ನಡ	1	8	0
17 ಶ.	ಚಿಕುಪಾಧ್ಯಾಯನ ವಿಷ್ಣುಪುರಾಣ, ೧, ೪, ೫, ೧ೆ ಅಂಶಗಳು	3	4	0
17 ಶ.	ಕನ್ನಡ ವಚನ ಕಾದಂಬರಿ–ಪೂರ್ವಭಾಗ	0	15	0
17 ಶ.	ಭಾಳಲೋಚನನ ಬತ್ತೀಸಪುತ್ತಳಿ ಕಥೆಗಳು	1	4	0
19 ಶ.	✦ ಮುದ್ದಣ್ಣನ ಶ್ರೀರಾಮಾಶ್ವಮೇಧಂ (ಹಳಗನ್ನಡ) ..			
19 ಶ.	ಅದ್ಭುತರಾಮಾಯಣಂ (ಸಟಿಪ್ಪಣ) ,, ...	0	12	0

ನಾಟಕ :—

17 ಶ.	ಸಿಂಗರಾರ್ಯನ ಮಿತ್ರವಿಂದಾಗೋವಿಂದ ನಾಟಕಂ ..	1	0	0

ನಾಟಕಗದ್ಯಾನುವಾದಗಳು :—

18 ಶ.	ಉತ್ತರ ರಾಮಚರಿತ್ರಕಥೆ	1	8	0
19 ಶ.	ಮುಮ್ಮಡಿ ಕೃಷ್ಣರಾಜ ಒಡೆಯರ ಶಾಕುಂತಳ ನವೀನ ಟೀಕೆ	1	12	0
19 ಶ.	,, ವತ್ಸರಾಜ ಕಥೆ–ಪೂರ್ವಭಾಗ (ರತ್ನಾವಳೀ ಕಥೆ)	2	0	0
19 ಶ.	,, ಪ್ರಬೋಧಚಂದ್ರೋದಯ ಕಥೆ (1-3 ಅಂಕಗಳು)	0	12	0

ಶತಕಗಳು :—

1165	ಹರಿಹರ ದೇವನ ಪಂಪಾಶತಕಂ.. .. .	0	3	6
	ಸುಭಾಷಿತ ಮುಕ್ತಕಶತಕಂ (ಸಂಕಲಿತ)	0	3	6

ಕರ್ಣಾಟಕ ಕಾವ್ಯಕಲಾನಿಧಿ ಗ್ರಂಥಗಳ ಪಟ್ಟಿ

ಕ್ರಿ. ಶ.		ರೂ.	ಆ.	ಪೈ.
17 ಶ.	* ಕವಿಹಂಸರಾಜನ ರತ್ನಾಕರ ಶತಕ			
17 ಶ.	* ರತ್ನಾಕರ ಕವಿಯ ಅಪರಾಜಿತೇಶ್ವರ ಶತಕ			
19 ಶ.	ಶ್ರೀವಾಸನ ವರ್ಷ ವರ್ಧಂತೀ ಶತಕ (ವಾರ್ಧಿಕ ಷಟ್ಪದಿ) ..	0	3	6
	ಅಲಂಕಾರ ಗ್ರಂಥಗಳು :—			
1150	ಉದಯಾದಿತ್ಯಾಲಂಕಾರಂ	0	3	0
17 ಶ.	* ತಿರುಮಲೆಯಾರ್ಯನ ಅಪ್ರತಿಮ ವೀರಚರಿತೆ			
	ರಸಗ್ರಂಥ :—			
12 ಶ.	* ಕವಿಕಾಮನ ಶೃಂಗಾರರತ್ನಾಕರ			
	ನಿಘಂಟುಗಳು :—			
15 ಶ.	* ಕರ್ಣಾಟಕ ನಿಘಂಟು			
15 ಶ.	ಚತುರಾಸ್ಯ ನಿಘಂಟು	0	4	6
15 ಶ.	ಶಬ್ದಸಾರ ನಿಘಂಟು (ಗದ್ಯ)	0	4	6
17 ಶ.	ಸೂರ್ಯಕವಿಯ ಕವಿಕಂಠ ಹಾರ	0	7	0
17 ಶ.	ಕರ್ಣಾಟಕ ಸಂಜೀವನವೆಂಬ ಉಬುಕುಳನಿಘಂಟು ..	0	2	6
	ಛಂದಸ್ಸು :—			
990	ನಾಗವರ್ಮನ ಛಂದೋಂಬುಧಿ, ಸಟಿಪ್ಪಣ	1	8	0
18 ಶ.	ನಂದಿಕವಿಯ ನಂದಿಛಂದಸ್ಸು, ಸವಿವರಣಂ	0	7	0
	ವ್ಯಾಕರಣ :—			
12 ಶ.	ನಾಗವರ್ಮನ ಶಬ್ದಸ್ಮೃತಿ (ಅಸಮಗ್ರ)	0	12	0
	ಸಾಂಗತ್ಯದ ಹಾಡು :—			
16 ಶ.	ಕನಕದಾಸನ ಮೋಹನ ತರಂಗಿಣಿ	2	8	0
16 ಶ.	ಪ್ರಧಾನಿ ತಿರುಮಲಾರ್ಯನ ಕರ್ಣ ವೃತ್ತಾಂತ ಕಥೆ ..	0	8	0
17 ಶ.	* ಸಂಚಿಹೊನ್ನಮ್ಮನ ಹದಿಬದೆಯ ಧರ್ಮ			
17 ಶ.	ಕೃಷ್ಣಗೋಪೀವಿಲಾಸ ಅಥವಾ ಕೃಷ್ಣಬಾಲಲೀಲೆ ..	0	8	0
17 ಶ.	ನಂಜಕವಿಯ ಕಫೋತವಾಕ್ಯಂ	0	1	0

ಕರ್ಣಾಟಕ ಕಾವ್ಯಕಲಾನಿಧಿ ಗ್ರಂಥಗಳ ಪಟ್ಟಿ

ಕ್ರಿ. ಶ.		ರೂ.	ಆ.	ಪೈ.
	ಕೀರ್ತನೆಗಳು :—			
17 ಶ.	ಚಿಕದೇವರಾಯನ ಗೀತಗೋಪಾಲ ಪ್ರಬಂಧ ..	0	12	0
17 ಶ.	ಭಗವದ್ಗೀತಾರ್ಥ ಪ್ರತಿಪಾದನ (ಪ್ರಾಚೀನ ಟೀಕಾಸಹಿತ)			
18 ಶ.	ಗಜೇಂದ್ರಮೋಕ್ಷ (ದ್ವಿಪದಿ, ಉದಯರಾಗ)	0	1	0
18 ಶ.	ಧ್ರುವಚರಿತ್ರೆ (ಉದಯರಾಗ, ವಾರ್ಧಿಕಷಟ್ಪದಿ) ..	0	1	0
	ಮತಗ್ರಂಥಗಳು :—ಗದ್ಯ			
17 ಶ.	ವೇದಾಂತವಿವೇಕಸಾರ, ಪ್ರಥಮಭಾಗ (ಅದ್ವೈತ) ..	1	6	6
17 ಶ.	ಚಿಕದೇವರಾಯ ಬಿನ್ನಪಂ (ವಿಶಿಷ್ಟಾದ್ವೈತ) ..	0	10	0
19 ಶ.	ಜೀವೇಶ್ವರ ಸಾಂಗತ್ಯಂ (ಅದ್ವೈತ)	0	1	0
	ಮಂ. ಆ. ರಾಮಾನುಜ್ಯಯಂಗಾರ್ಯರ ನವೀನ ಗ್ರಂಥಗಳು :—			
	ಮಹಾಭಾರತ ಕಥಾಪ್ರಸಂಗ * ಆದಿಪರ್ವ ಮತ್ತು ಸಭಾಪರ್ವ	0	9	0
	ಕವಿಸಮಯಂ—ಕಾವ್ಯರಸವನ್ನು ಬೋಧಿಸುವ ವಿಮರ್ಶೆ ..	1	4	0
	ಸುವ್ರತ—ಕರ್ಮವಿಲಾಸವನ್ನು ಬೋಧಿಸುವ ಕಾದಂಬರಿ ..	0	12	0
	ಕವಿಕಾರ್ಯ ಪ್ರಶಂಶೆ	0	3	0
	ಪ್ರಮಾಣಪ್ರಮೇಯ ವಿವೇಕ—ಮತಬೋಧಾವತರಣಿಕೆ ..	0	2	0
	* ಪ್ರಬಂಧಾವಳಿ ಅಥವಾ ಐಹಿಕಸುಖಸಾಧನಂ			

N.B.—* ಈ ರೀತಿ ಗುರುತಿಸಿರುವ ಕೋಶಗಳು ಪುನರ್ಮುದ್ರಣವಾಗತಕ್ಕವುಗಳು.

Apply to :—

M. AJI. NARASIMHACHAR, B.A.,
Karnataka Kavya Kalanidhi Office,
Mysore.

ಪ್ರಕಟಣೆ.

——:0:——

ಕರ್ಣಾಟಕ ಕಾವ್ಯಮಂಜರಿ ಎಂಬ ನಾನಾವಿಧ ಪ್ರಾಚೀನ ಕಾವ್ಯ ನಾಟಕ ಛಂದೋಲಂಕಾರ ವ್ಯಾಕರಣ ನಿಘಂಟು ವೈದ್ಯ ಜ್ಯೋತಿಷ ಸೂಪ ಶಿಲ್ಪ ಗ್ರಂಥ ಸಂಗ್ರಹದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸಹಿತ ೩–೮–೦

ಈ ಮಾಸಪತ್ರಿಕೆಯಲ್ಲಿ ಪೂರ್ಣವಾಗಿ ಕ್ರಯಕ್ಕೆ ಸಿದ್ಧವಾಗಿರುವ ಗ್ರಂಥಗಳು.

೧	ರತ್ನಾಕರಾಧೀಶ್ವರಶತಕಂ, ಅಪರಾಜಿತೇಶ್ವರ ಶತಕಂ	೦—೮—೦
೨	ಕಟ್ಟಿಗರಕಾವಂ, ಟಿಪ್ಪಣಿಯೊಡನೆ	೧—೨—೦
೩.	ಕರ್ಣಾಟಕ ನಿಘಂಟು	೦—೨—೬
೩	ಹದಿಬದೆ ಧರ್ಮ (ಪತಿವ್ರತಾಧರ್ಮ) ..	೧— ೬—೦
೫	ಚತುರಾಶ್ರಮ ನಿಘಂಟು	೦— ೪—೦
೬.	ಉದಯಾದಿತ್ಯಾಲಂಕಾರ	೦—೨—೬
೭.	ಮಿತ್ರವಿಂದಾಗೋವಿಂದಂ ಟಿಪ್ಪಣಿಯೊಡನೆ ..	೦— ೧೪— ೦
೮.	ಅಪ್ರತಿಮವೀರಚರಿತಂ (ಅಲಂಕಾರ) ...	೧—೮ — ೦
೯.	ಶೃಂಗಾರರತ್ನಾಕರಂ (ನವರಸಪ್ರಕರಣ) ...	೦— ೧೨—೦
೧೦	ಕೃಷ್ಣಗೋಪೀವಿಲಾಸ ಸಂಗತ್ಯ ..	೦— ೫ —೬
೧೧.	ಮಲ್ಲಿನಾಥ ಪುರಾಣಂ ಟಿಪ್ಪಣಿಯೊಡನೆ ..	೩—೦ —೦
೧೨	ಗದಾಯುದ್ಧಂ	೧—೪ —೦
೧೩.	ಚಿಕದೇವರಾಯ ವಂಶಾವಳಿ ಟಿಪ್ಪಣಿಯೊಡನೆ ...	೧—೮ — ೦

ಈ ದರಕ್ಕೆ ಹಾಸಲು ಸೇರಿಲ್ಲ.

ಈ ಗ್ರಂಥಗಳು ಮೈಸೂರು ಕರ್ಣಾಟಕ ಕಾವ್ಯಮಂಜರಿ ಆಫೀಸಿನಲ್ಲಿಯೂ, ಮೈಸೂರು ದಿ. ಗ್ರಾಜ್ಯುಯೇಟ್ಸ್ ಪ್ರೇಡಿಂಗ್ ಅಸೋಸಿಯೇಷನಲ್ಲಿಯೂ ದೊರೆಯುತ್ತವೆ.